# ಹಂಪಿ ಟೈಮ್ಸ್

## HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

Scan For Digital Colourful
Hampi Times E-paper

www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com

ಸಂಪುಟ:01 Volume:01 • ಸಂಚಿಕೆ:260 Issue:260 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 12.03.2024 12.03.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2








## ಮಾ.13 ಉದ್ದಿಮೆದಾರರಿಗೆ ಜಾಗೃತಿ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**




ಆದಾಯ ತೆರಿಗೆ ಇಲಾಖೆಯಿಂದ ವ್ಯಾಪಾರಿಗಗಳು ಹಾಗೂ ಉದ್ದಿಮೆದಾರರಿಗೆ ಜಾಗೃತಿ ಕಾರ್ಯ ಕ್ರಮವನ್ನು ಮಾ. 13 ರಂದು ಬೆಳಗ್ಗೆ 11 ಗಂಟೆಗೆ ಹೊಸಪೇಟೆ ನಗರದ ಮಲ್ಲಿಗೆ ಹೋಟೆಲ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಆದಾಯ ತೆರಿಗೆ ಪಾವತಿ ನವೀಕೃತ ವಿಧಾನ, ಮುಂಗಡ ತೆರಿಗೆ ಪಾವತಿ, ಲಾಭಗಳು, ಆದಾಯ ತೆರಿಗೆ ಪಾವತಿಯಲ್ಲಿ ಸಾರ್ವಜನಿಕರ ಜವಾಬ್ದಾರಿ, ತೆರಿಗೆ ಪಾವತಿ ಬಾಕಿ ಪ್ರಕರಣಗಳು ಹಾಗೂ ತೆರಿಗೆ ಸಂಬಂಧಿತ ಇತರ ವಿಷಯಗಳ ಕುರಿತು ಮಾಹಿತಿ ಒದಗಿಸಲಾಗುವುದು. ನಗರದ ಉದ್ದಿಮೆದಾರರು, ಆದಾಯ ತೆರಿಗೆ ಪಾವತಿದಾರರು ಕಾರ್ಯಕ್ರಮದ ಸದುಪಯೋಗ ಪಡೆಯುವಂತೆ ಹೊಸಪೇಟೆ ವಿಭಾಗದ ಆದಾಯ ತೆರಿಗೆ ಅಧಿಕಾರಿಗಳಾದ ಕೆ.ಲೋಕೇಶ ತಿಳಿಸಿದ್ದಾರೆ.

## ವಿವಿಧ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆರೋಗ್ಯ ಅಭಿಯಾನ ಎನ್.ಪಿ–ಎನ್.ಸಿ.ಡಿ ಕಾರ್ಯಕ್ರಮದಡಿಯಲ್ಲಿ ಆರೋಗ್ಯ ಇಲಾಖೆಯಿಂದ ವಿಜಯನಗರ ಜಿಲ್ಲೆಯ ವಿವಿಧ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಲಾಗಿದೆ.

ಜಿಲ್ಲಾ ಕಾರ್ಯಕ್ರಮ ಸಂಯೋಜಕರು, ಜಿಲ್ಲಾ ಹಣಕಾಸು ಮತ್ತು ಲಾಜಿಕ್ ಸಲಹೆಗಾರರು, ತಜ್ಞ ವೈದ್ಯರು, ಶುಶ್ರೂಷಕಿ, ಪ್ರಯೋಗಶಾಲಾ ತಂತ್ರಜ್ಞರು, ಭೌತ ಚಿಕಿತ್ಸಕರು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಕಾರ್ಯಕ್ರಮ ಸಂಯೋಜಕರು ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ ಈ ನೇಮಕಾತಿಯ ಒಟ್ಟು ಅರ್ಜಿ ಸಲ್ಲಿಸಿದವರ ಪಟ್ಟಿ, ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆ ಪಟ್ಟಿ ತಿರಸ್ಕರಿಸಿದ ಅರ್ಜಿಗಳ ಪಟ್ಟಿಗಳನ್ನು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿದೆ. ಇದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮಾ.15ರ ಸಂಜೆ 5 ಗಂಟೆಯೊಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಬಯಲು ಸೀಮೆಯ ಬವಣೆ ಕರಟಕ ದಮನಕ

### ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಹೊಸಪೇಟೆಯಲ್ಲಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

'ಕರಟಕ ದಮನಕ' ತೆರೆ ಕಂಡ ನಾಲ್ಕು ದಿನಗಳಲ್ಲಿ ರಾಜ್ಯಾದ್ಯಂತ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಚಿತ್ರದ ಪ್ರತಿ ಸನ್ನಿವೇಶ ಉತ್ತರ ಕರ್ನಾಟಕ ಭಾಗವನ್ನು ಪ್ರತಿನಿಧಿಸುವ ಜೊತೆಗೆ ಪ್ರತಿಯೊಂದು ಪಾತ್ರದಲ್ಲಿ ನಿಮ್ಮನ್ನು ಕಾಣುವಿರಿ ಎಂದು ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಹೇಳಿದರು.

'ಕರಟಕ ದಮನಕ' ಚಿತ್ರದ ಪ್ರಮೋಷನ್‌ಗಾಗಿ ಸೋಮವಾರ ಹೊಸಪೇಟೆಗೆ ಆಗಮಿಸಿದ್ದ ಅವರು ಪತ್ರಿಕಾ ಭವನದಲ್ಲಿ ಏರ್ಪಡಿಸಿದ್ದ ಸಂವಾದದಲ್ಲಿ ಮಾತನಾಡಿ, 'ಕರಟಕ ದಮನಕ' ಎಂಬುದು ಪಂಚತಂತ್ರದ ತಿರುಳಾಗಿದ್ದು, ಬಯಲು ಸೀಮೆಯ ಜನರ ಬದುಕು–ಬವಣೆಯನ್ನು ಪ್ರತಿಬಿಂಬಿಸುತ್ತದೆ. ಚಿತ್ರದಲ್ಲಿ 6 ಹಾಡುಗಳೊಂದಿಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವಂತಿದ್ದು, ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಸೆಳೆಯುವ ಎಲ್ಲ ಎಲಿಮೆಂಟ್ಸ್‌ಗಳಿವೆ. ಚಿತ್ರದ ಬಹುತೇಕ ಸನ್ನಿವೇಶಗಳಲ್ಲಿ ಹಿರೋ– ಹಿರೋಯಿನ್ >> 3

## ನೂತನ ಪ್ರಧಾನ ಧರ್ಮಕರ್ತರಾಗಿ ಶೇಖರಯ್ಯ ಅಧಿಕಾರ ಸ್ವೀಕಾರ



**ಹಂಪಿ ಟೈಮ್ಸ್ ಕೊಟ್ಟೂರು**

ಅಸಂಖ್ಯಾತ ಭಕ್ತರ ಆರಾಧ್ಯ ಧೈವ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ಹೀರೆಮಠದ ನೂತನ ಪ್ರಧಾನ ಧರ್ಮಕರ್ತರಾಗಿ ಎಂ.ಕೆ. ಶೇಖರಯ್ಯ ಸೋಮವಾರ ಅಧಿಕಾರ ವಹಿಸಿಕೊಂಡರು.

ಜಿಲ್ಲಾಧಿಕಾರಿಯವರ ಆದೇಶದನ್ವಯ ದೇವಾಲಯದ ಧಾರ್ಮಿಕ ದತ್ತಿ ಇಲಾಖೆ ಸಹಾಯಕ ಆಯುಕ್ತ ಗಂಗಾಧರಪ್ಪ, ಕಾರ್ಯನಿರ್ವಹಕ ಅಧಿಕಾರಿ ಎಂ.ಬಿ. ಕೃಷ್ಣಪ್ಪ ನೇತೃತ್ವದಲ್ಲಿ ನಿಕಟಪೂರ್ವ ಪ್ರಧಾನ ಧರ್ಮಕರ್ತ ಸಿ,ಎಚ್. ಎಂ. ಗಂಗಾಧರಯ್ಯ, ನೂತನ ಪ್ರಧಾನ ಧರ್ಮಕರ್ತ ಎಂ.ಕೆ. ಶೇಖರಯ್ಯ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಈ ದಿನದಿಂದ ಆರು ವರ್ಷಗಳ ಕಾಲ ಎಂ.ಕೆ. ಶೇಖರಯ್ಯ ಶ್ರಿಗುರು ಕೊಟ್ಟೂರೇಶ್ವರ ಸ್ವಾಮಿ ದೇವಾಸ್ಥಾನದ ಪ್ರಧಾನ ಧರ್ಮಕರ್ತರಾಗಿ ಕಾರ್ಯನಿರ್ವಹಿಸಲಿದ್ದಾರೆ. ಈ ವೇಳೆ ಜಿಲ್ಲಾಧಿಕಾರಿ ಆಪ್ತ ಸಹಾಯಕ ನವೀನ, ಉಪ ತಹಶೀಲ್ದಾರ್ ಅನ್ನದಾನೇಶ ಪತ್ತಾರ, ಮಾಜಿ ಪ್ರಧಾನ ಧರ್ಮಕರ್ತ ಡಾ. ಎ,ಎಂ. ನಾಗಭೂಷಣ, ಎಂ.ಓ. ಕೊಟ್ರಯ್ಯ, ಎ.ಎಂ.ಬಿ. ಕೊಟ್ರಯ್ಯ, ಎ.ಎಂ.ಜಿ. ಮಲ್ಲಿಕಾರ್ಜುನ, ಕೆಂಪ್ಪಳಿ ಗೌಡ್ರು, ಎಂ.ಜಿ. ಮಂಜುನಾಥ್ ಹಾಗೂ ಕಟ್ಟೆಮನೆ ಸಮಸ್ಥ ಧೈವದವರು ಹಾಜರಿದ್ದರು.

> ಧಾರ್ಮಿಕ ದತ್ತಿ ಇಲಾಖೆಯ ಸಲಹೆ, ಮಾರ್ಗದರ್ಶನ, ಭಕ್ತರ ಸಹಕಾರದೊಂದಿಗೆ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಅಗತ್ಯ ಸೌಲಭ್ಯ, ಸೌಕರ್ಯವನ್ನು ಕಲ್ಪಿಸಿಕೊಡುವ ಜೊತೆಗೆ ದೇವಸ್ಥಾನದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.
>
> – **ಎಂ.ಕೆ ಶೇಖರಯ್ಯ,** ನೂತನ ಪ್ರಧಾನ ಧರ್ಮಕರ್ತರು



# ಸಿಂಗಟಾಲೂರಿನಿಂದ ನೀರು ಹರಿಸಿ

### ಶಾಸಕ ಕೆ.ನೇಮಿರಾಜ್‌ನಾಯ್ಕ್ ಆಗ್ರಹ । ಬೇಸಿಗೆಯ ನೀರಿನ ಸಮಸ್ಯೆ ಬಗೆಹರಿಯಲಿದೆ

### ವಿವಿಧ ಕಾಮಗಾರಿಗಳ ಉದ್ಘಾಟನೆ । ಉಸ್ತುವಾರಿ ಸಚಿವರು ಡಿಸಿಎಂ ಜೊತೆ ಚರ್ಚಿಸಿ ನೀರು ಬಿಡಿಸಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತುಂಗಭದ್ರ ನದಿಯಲ್ಲಿ ಸಂಪೂರ್ಣ ನೀರು ಖಾಲಿಯಾಗಿರುವ ಕಾರಣ, ಪಟ್ಟಣ ಸೇರಿದಂತೆ ಕೂಡ್ಲಿಗಿ, ಕೊಟ್ಟೂರು ಪಟ್ಟಣಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದೆ. ಕೂಡಲೆ ಸಿಂಗಟಾಲೂರು ಜಲಾಶಯದಲ್ಲಿ ಸಂಗ್ರಹ ಇರುವ ನೀರಲ್ಲಿ 1 ಟಿ.ಎಂ.ಸಿ ನೀರು ನದಿಗೆ ಹರಿಸಿದರೆ, ಬೇಸಿಗೆಯ 3 ತಿಂಗಳು ಸಮಸ್ಯೆ ಬಗೆಹರಿಯಲಿದೆ ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ಹೇಳಿದರು.

ಪಟ್ಟಣ ಸೇರಿದಂತೆ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಳ ಉದ್ಘಾಟನೆ ಮತ್ತು ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಈಗಾಗಲೇ ನದಿಯಲ್ಲಿ ನೀರಿಲ್ಲದ ಕಾರಣ ಸಾರ್ವಜನಿಕರಿಗೆ ಕುಡಿಯುವ ನೀರು ಕೊಡುವುದು ಕಷ್ಟವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಲ್ಲಿ ಮನವಿಯ >>3



**ಹೊಸಪೇಟೆ ತಾಲೂಕು 76 ವೆಂಕಟಾಪುರದಲ್ಲಿ ಶ್ರೀ ರಾಮಲಿಂಗೇಶ್ವರ ರಥೋತ್ಸವವು ಸಾವಿರಾರು ಭಕ್ತರ ನಡುವೆ ಅದ್ದೂರಿಯಿಂದ ಸೋಮವಾರ ಜರುಗಿತು.**


14 ಭಾಷೆ
ಈಗ ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com


# ಬಿಸಿಲಿನ ತಾಪಮಾನಕ್ಕೆ ಭಕ್ತರು ಹೈರಾಣ

### ಭಕ್ತರ ಸಂಖ್ಯೆಗನುಗುಣವಾಗಿ ಬೇಕಿದ ನೆರಳಿನ ಮೇಲ್ಛಾವಣಿ । ಸಾಲಿನಲ್ಲಿ ನಿಂತ ಭಕ್ತರಿಗಿಲ್ಲ ನೀರಿನ ಪೂರೈಕೆ

**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಆರಾಧ್ಯ ದೇವರು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಶಿವರಾತ್ರಿ ಅಮವಾಸ್ಯೆ ನಿಮಿತ್ತ ಭಾನುವಾರ ಭಕ್ತರು ದಂಡು ದಂಡಾಗಿ ಆಗಮಿಸಿ, ಬಿರು ಬಿಸಿಲನ್ನು ಲೆಕ್ಕಿಸದೆ ಸರತಿ ಸಾಲಿನಲ್ಲಿ ನಿಂತು ಭಕ್ತರು ಶ್ರೀ ಸ್ವಾಮಿಯ ದರ್ಶನ ಪಡೆದುಕೊಂಡರು.

ಶುಕ್ರವಾರ ಮಹಾಶಿವರಾತ್ರಿ ಪ್ರಯುಕ್ತ ದೇವಸ್ಥಾನದಲ್ಲಿ ಬೆಳಿಗ್ಗೆ ಯಿಂದ ರಾತ್ರಿ ಇಡೀ ಶ್ರೀ ಸ್ವಾಮಿಗೆ ರುದ್ರಾಭಿಷೇಕ್, ಮಹಾಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕಾರ್ಯಗಳು ನೆರವೇರಿದವು, ಪೂಜೆಗಳಲ್ಲಿ ಭಕ್ತರು ಪಾಲ್ಗೊಂಡು ಭಕ್ತಿ ಸಮರ್ಪಿಸಿದರು.



ಭಾನುವಾರ ಅಮವಾಸ್ಯೆ ಬಂದಿರುವ ಕಾರಣ ತಾಲೂಕು ಸೇರಿದಂತೆ ಜಿಲ್ಲೆಯಲ್ಲದೆ, ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತರು ದಂಡು ಆಗಮಿಸಿ ದೇವಸ್ಥಾನದ ಎರಡು ಇಕ್ಕೇಲುಗಳಲ್ಲಿ ಸುಮಾರು 300–400 ಮೀಟರ್ ಉದ್ದವಾಗಿ ಬೆಳಿಗ್ಗೆ ಯಿಂದ ಮಧ್ಯಾಹ್ನ 3.30 ರ ವರೆಗೆ ಬಿರು ಬಿಸಿಲನ್ನು ಲೆಕ್ಕಿಸದೆ ಸರತಿ ಸಾಲಿನಲ್ಲಿ ನಿಂತು ಭಕ್ತರು ಶ್ರೀ ಸ್ವಾಮಿಯ ದರ್ಶನ ಪಡೆದರು.

ದೇವಸ್ಥಾನಕ್ಕೆ ಹೋಗುವ ಬಲ ಬಾಗದಲ್ಲಿ ಮಾತ್ರ 200 ಮೀಟರ್ ಸರತಿಯಲ್ಲಿ ನಿಂತ ಭಕ್ತರಿಗೆ ನೆರಳಿನ ಮೇಲ್ಛಾವಣಿ ವ್ಯವಸ್ಥೆ ಇದ್ದು, ಎಡ ಭಾಗದಲ್ಲಿ ದತ್ತಿ ಇಲಾಖೆ ಸರಣಿಯಲ್ಲಿ ನಿಂತ ಭಕ್ತರಿಗೆ ನೆರಳಿಗೆ ಪೆಂಡಾಲ್ ವ್ಯವಸ್ಥೆಯನ್ನು ಕಲ್ಪಿಸಿದ್ದರು, ಉಳಿದ ಅಂದರೆ ಗಾಂಧಿ ಸರ್ಕಲ್ ವರೆಗೆ ಬಲಭಾಗದಲ್ಲಿ, ಎಡ ಭಾಗದಲ್ಲಿ ಮೇನ್ ರಸ್ತೆಯವರೆಗೆ ಇನ್ನೂ 200 ಮೀಟರ್ ಉದ್ದದಲ್ಲಿ ನಿಂತ ಭಕ್ತರಿಗೆ ನೆರಳಿನ ವ್ಯವಸ್ಥೆ ಇಲ್ಲದೆ ಭಕ್ತರು ಬಿಸಿಲನಲ್ಲಿಯೇ ನಿಂತು ದೇವರದರ್ಶನ ಪಡೆಯುವ ದುಸ್ಥಿತಿ ನಿರ್ಮಾಣವಾಗಿತ್ತು,.

ಬಿಸಿಲಿನ ಚುರುಕು ಹೆಚ್ಚಾಗಿದ್ದ ಕಾರಣ ಕೆಲ ಭಕ್ತರ ಆರೋಗ್ಯದಲ್ಲಿ ವ್ಯತ್ಯಾಸಗಳು ಉಂಟಾಗಿರುವಂತದ್ದು ಅಲ್ಲಲ್ಲಿ ಗೋಚರಿಸಿತು, ಇನ್ನೂ ಕೆಲ ಭಕ್ತರು ದೇವರ ದರ್ಶನ ಮುಗಿಯುವ ಹೊತ್ತಿಗೆ ಹೈರಾಣಾಗಿ ಸುಸ್ತಾದದ್ದು ಕಂಡು ಬಂದಿತು.




## ವಚನ ಅರಿವು

### ಒಳಗಿರುವ ದೇವರ ಪೂಜೆ

**ಸತ್ಯವೆ ಜಲ, ಸಮತೆಯೆ ಗಂಧ, ಅರಿವೆ ಅಕ್ಷತೆ,**
**ಭಾವ ಕುಸುಮ, ಸ್ವತಂತ್ರ ಧೂಪ, ನಿರಾಳ ದೀಪ,**
**ಸ್ವಾನುಭಾವ ನೈವೇದ್ಯ, ಸಾಧನಸಾಧ್ಯ ಕರ್ಪುರವೀಳೆಯ.**
**ಇವೆಲ್ಲವ ನಿಮ್ಮ ಪೂಜೆಗೆಂದೆನ್ನಕರಣಂಗಳು ಪಡೆದಿರಲು**
**ಹೃದಯ ಮಧ್ಯದಲ್ಲಿದ್ದು ಗಮ್ಮನೆ ಕೈಕೊಂಡೆಯಲ್ಲಾ**
**ಸೌರಾಷ್ಟ್ರ ಸೋಮೇಶ್ವರಾ.**


**– ಆದಯ್ಯ**

ಪರಮಾತ್ಮ ಮನುಷ್ಯನ ಹೃದಯದಲ್ಲಿಯೇ ಇದ್ದಾನೆ. ಆತನ ಪೂಜೆಯನ್ನು ಮಾಡಬೇಕು. ಒಳಗಿರುವ ಶಿವನ ಪೂಜೆಗೆ ಬೇಕಾದ ಸಲಕರಣೆಗಳು ಹೊರಗಿನಿಂದ ತಂದು ಮಾಡುವಂತಹವುಗಳಲ್ಲ. ನಮ್ಮಲ್ಲೇ ಇರುವಂತಹವುಗಳು. ಸತ್ಯವೆಂಬ ನೀರನ್ನು ಎರೆಯಬೇಕು. ಸಮತೆಯೆಂಬ ಗಂಧದಿಂದ, ನಾವು ಪಡೆದ ಅರಿವಿನ ಅಕ್ಷತೆಯನ್ನು ಹಾಕಿ, ಶುದ್ಧಭಾವಗಳೆಂಬ ಹೂವುಗಳನ್ನು ಅರ್ಪಿಸಿ, ಸ್ವತಂತ್ರವೆಂಬ ಧೂಪವನ್ನು ಹಚ್ಚಬೇಕು. ಮನಸ್ಸನ್ನು ಒಳ್ಳೆಯ ತನದಲ್ಲಿ ಗಳಿಸಿದ ನಿರಾಳತೆಯ ಬೆಳಕನ್ನು ನಮ್ಮ ತಿಳುವಳಿಕೆಯೆಂಬ ನೈವೇದ್ಯವನ್ನು ಅರ್ಪಿಸಿ, ಆತ್ಮ ಸಾಧನೆಯನ್ನು ಮಾಡಿ ಕರ್ಪುರ ಬೆಳಗಿದಾಗ ಒಳಗಿರುವ ಶಿವ ತೃಪ್ತಿಯಿಂದ ಅರಿವಿನ ಪೂಜೆಯನ್ನು ಸ್ವೀಕರಿಸುತ್ತಾನೆ. ಆ ಅರಿವು ಕಂಡು ತನ್ನೊಳಗಿರುವ ದೈವ ಮೆಚ್ಚುತ್ತಾನೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ರಾಮಾಯಣ ಸದಾದರ್ಶನೀಯ



■ ದೀಪಶ್ರೀ ಎಸ್ ಕೊಡ್ಲಿಗಿ

ಲಂಕಾ ಸಾಮ್ರಾಜ್ಯದ ದಿಗ್ವಿಜಯದ ನಂತರ ಶ್ರೀರಾಮಚಂದ್ರನು ಅಯೋಧ್ಯೆಯ ಅರಸನಾಗುತ್ತಾನೆ. ಈ ಸಮಯ ಒಮ್ಮೆ ಸಾಕ್ಷಾತ್ ಯಮರಾಜನು ಶ್ರೀರಾಮನ ದರ್ಶನವನ್ನು ಪಡೆಯಲು ಹಾಗೂ ಪ್ರಮುಖವಾದದೊಂದು ವಿಷಯದ ಕುರಿತು ಚರ್ಚಿಸಲು ಅರಮನೆಗೆ ಆಗಮಿಸುತ್ತಾನೆ. ಚರ್ಚಾ ವಿಷಯವನ್ನು ಪ್ರಾರಂಭಿಸುವ ಮುನ್ನ ನಮ್ಮಿಬ್ಬರ ಮಾತುಕತೆ ಮುಗಿಯುವ ಮೊದಲು ಯಾರೇ ಅಡ್ಡಿಯುಂಟು ಮಾಡಿದರು, ಆ ವ್ಯಕ್ತಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಬೇಕು ಎಂದು ಪರಮಾತ್ಮ ರಾಮನಿಂದ ವಚನವನ್ನು ಪಡೆದನು ಯಮಧರ್ಮ.

ವಚನಭ್ರಷ್ಟನಾಗುವನೇ ಶ್ರೀರಾಮ ಆಗಲಿ ಎಂದು ವಚನವಿತ್ತನು. ಲಕ್ಷ್ಮಣನನ್ನು ಕರೆದು ಸಂಭಾಷಣೆಗೆ ತೊಂದರೆಯಾಗದಂತೆ ದ್ವಾರಪಾಲಕನಾಗು ಎಂದು ಸಹೋದರನಿಗೆ ಆದೇಶವಿತ್ತನು. ಅಣ್ಣನ ಆಜ್ಞೆಯನುಸಾರ ಲಕ್ಷ್ಮಣನೀಗಾ ದ್ವಾರಪಾಲಕ. ಕೆಲಹೊತ್ತಿನ ಬಳಿಕ ದೂರ್ವಾಸ ಮುನಿಗಳು ಸ್ಥಳಕ್ಕೆ ಆಗಮಿಸಿದರು. ತನ್ನಾಗಮನದ ಕುರಿತು ರಾಮನಿಗೆ ತಿಳಿಸಲು ಲಕ್ಷ್ಮಣನನ್ನು ಕೇಳಿದರು. ವಿನಯದಿಂದ ನಿರಾಕರಿಸಿದ ಲಕ್ಷ್ಮಣ. ವಿಧಿಯಾಟ ಎಂದರೆ ಇದುವೇ?ಕೋಪಗೊಂಡ ದೂರ್ವಾಸ ಮುನಿಗಳು ಇಡೀ ಅಯೋಧ್ಯೆಗೆ ಶಾಪ ನೀಡುವೆನೆಂದು ಹೇಳಿದರು. ಅಯೋಧ್ಯೆಯನ್ನು ರಕ್ಷಿಸುವ ಸಲುವಾಗಿ ಲಕ್ಷ್ಮಣ ತನ್ನ ಪ್ರಾಣವನ್ನು ತ್ಯಾಗ ಮಾಡಲು ನಿರ್ಧರಿಸಿದನು. ಕೋಣೆಯ ಒಳಹೊಕ್ಕ ಲಕ್ಷ್ಮಣನು ಅಣ್ಣನ ಅಣತಿಯನ್ನು ಮೀರಿದನು.

ರಾಮನು ಕೊಟ್ಟ ಮಾತಿನಂತೆ ಲಕ್ಷ್ಮಣನಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಬೇಕಿರುವುದರಿಂದ ತೀವ್ರ ವ್ಯಥೆಪಟ್ಟನು.ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಗುರು ವಶಿಷ್ಠರಲ್ಲಿ ಬೇರೆ ದಾರಿ ತೋರುವಂತೆ ಬೇಡಿದನು. ಗುರು ವಶಿಷ್ಠರು ಈಗ ಉಳಿದಿರುವ ದಾರಿ ಒಂದೇ .ನಿನ್ನಿಂದ ಲಕ್ಷ್ಮಣ ದೂರ ಇರಬೇಕು ಅಥವಾ ಸಾವನ್ನು ಅಪ್ಪಬೇಕು ಎರಡೇ ದಾರಿ ಇರುವುದು ಎಂದರು. ಇದನ್ನು ತಿಳಿದ ಲಕ್ಷ್ಮಣ ತಾನು ಅಣ್ಣನಿಂದ ಜೀವನಪರ್ಯಂತ ದೂರ ಉಳಿಯುವ ಬದಲು, ಸಾವನ್ನು ಒಪ್ಪಿಕೊಳ್ಳುವುದೇ ಒಳಿತು ಎಂದು ನಿರ್ಧರಿಸಿದ. ಕೂಡಲೇ ಜಲಸಮಾಧಿಯಾದ ಲಕ್ಷ್ಮಣ. ಇದೇ ಅಲ್ಲವಾ ತ್ಯಾಗದ ಸಂಕೇತ. ವನವಾಸ ಯುದ್ಧಾದಿಯೆಲ್ಲವನ್ನು ಮುಗಿಸಿ ಸುಖಜೀವನ ಪ್ರಾಪ್ತವಾದ ಬಳಿಕ ತನಗಾಗಿ ಅಲ್ಲದೇ ಸಾಮ್ರಾಜ್ಯದ ಉದ್ಧಾರಕ್ಕಾಗಿ ತ್ಯಾಗ ಮಾಡುವುದು ರಾಮನಿಗಾಗಲಿ ಹಾಗೂ ಅವನ ಸಹೋದರ ಲಕ್ಷ್ಮಣನಿಗಾಗಲಿ ಹೊಸದೇನಲ್ಲ.ಅಣ್ಣನಿಗಾಗಿ, ಸಾಮ್ರಾಜ್ಯದ ಒಳಿತಿಗಾಗಿ ತನ್ನ ಪ್ರಾಣವನ್ನು ಬಲಿಕೊಟ್ಟ ಲಕ್ಷ್ಮಣ ಸರ್ವರಿಗೂ ಅನುಕರಣನೀಯ. ಇದು ಕೇವಲ ರಾಮಾಯಣದ ಒಂದು ಘಟನೆಯಷ್ಟೇ, ರಾಮಾಯಣದ ಒಳಹೊಕ್ಕು ನೋಡಿದಾಗ ಇಂತಹ ಮೌಲ್ಯಯುತ ಘಟನೆಗಳು ಅವೆಷ್ಟೋ .ತ್ಯಾಗ ಮಾತ್ರವಲ್ಲ ನೈತಿಕ ಮೌಲ್ಯ ತಿಳಿಯಲು ರಾಮಾಯಣದ ಅಧ್ಯಯನ ಪರಿಪಾಠ ಮಾಡಬೇಕಿದೆ. ರಾಮನ ನೆರಳಿನಲ್ಲಿ ಬದುಕಿದ ಲಕ್ಷ್ಮಣ ಕೆಟ್ಟವನಾಗುವುದುಂಟೆ?. ಸಾಮ್ರಾಜ್ಯಕ್ಕಾಗಿ ಪ್ರಾಣದಾನ ಮಾಡಿದ ಲಕ್ಷ್ಮಣ ನಿಜಕ್ಕೂ ಧನ್ಯ. ಇದೆ ಅಲ್ಲವಾ ನಿಸ್ವಾರ್ಥ. ಸ್ವಾರ್ಥಕ್ಕಾಗಿ ಮನುಷ್ಯ ಎಂತಹ ಕೆಲಸ ಮಾಡಲು ಹೇಸುವುದಿಲ್ಲ. ಒಮ್ಮೆ ರಾಮಾಯಣದ ಕಡೆಗೆ ಕಣ್ಣು ಹಾಯಿಸಿದರೆ ಅವನು ನಿಜಕ್ಕೂ ನಿಸ್ವಾರ್ಥದ ಹಾದಿ ಹಿಡಿಯುತ್ತಾನೆ. ಅದವೇ ರಾಮಾಯಣಕ್ಕೆ ಇರುವ ಶಕ್ತಿ. ನಿಜವಾದ ಯಶಸ್ಸು ಅಡಗಿರುವುದು ತ್ಯಾಗದ ಹಿಂದೆಯೇ. ತ್ಯಾಗ ಮಾಡಿ ಮರಣಿಸಿದ ಲಕ್ಷ್ಮಣ ನಿಜಕ್ಕೂ ದೊಡ್ಡವನಾದ.ಹೂವಿನೊಂದಿಗೆ ನಾರು ಸ್ವರ್ಗಕ್ಕೆ ಹೋದಂತೆ ರಾಮನ ನೆರಳಿನಲ್ಲಿ ನೈತಿಕತೆಯನ್ನು ಕಲಿತ ಲಕ್ಷ್ಮಣ ಸಹ ಇಂದಿಗೂ ಪೂಜಿತನಾದ, ಆದರ್ಶನೀಯನಾದ. ರಾಮಾಯಣದ ಇಂತಹ ಹತ್ತು ಹಲವು ಘಟನೆಗಳು ರಾಮಾಯಣದಲ್ಲಿ ಬರುವ ಎಲ್ಲ ಪಾತ್ರಗಳು ಸದಾದರ್ಶನೀಯ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ–ಮೇಲ್:hampitimes@gmail.com M: 9448633038

# ಅಂಧನಾದರೂ ಆನಂದ ತಂದ ಕೇಶವ

## ಹೆತ್ತವರ ಕೊರಗಿಗಿಲ್ಲವೆ ಕೊನೆ? | ಹಾಸನದ ಕ್ರೀಡಾಕಲಿ

ಹೇ ಭಗವಂತ ನೀನೆಷ್ಟು ಬುದ್ಧಿವಂತ ಯಾರಿಗೆ ಏನು ಕೊಡಬೇಕು ಎಷ್ಟು ಕೊಡಬೇಕು ಎಂಬುದು ನಿನಗೆ ತುಂಬಾ ಚೆನ್ನಾಗಿ ಗೊತ್ತಿದೆ.

ಅತ್ಯಂತ ಕಷ್ಟ ಬಡತನದಲ್ಲಿ ಬೆಳೆದುದಲ್ಲದೆ ತನ್ನ ಎರಡು ಕಣ್ಣುಗಳನ್ನು ಕಳೆದುಕೊಂಡು ಈ ದೇಶ ಈ ಅದ್ಭುತ ಸಾಧಕನ ನೋಡುವಂತೆ ಮಾಡಿದ ನಿನ್ನ ಮಹಿಮೆ ಅಪಾರ.

ಹೌದು ನಾನು ಈ ಲೇಖನದಲ್ಲಿ ಹೇಳ ಹೊರಟಿರುವ ಸಾಧಕನ ಹೆಸರೇ ಕೇಶವಮೂರ್ತಿ.

ಇವರ ಕರುಣಾಜನಕ ಸ್ಥಿತಿಯನ್ನು ಕೇಳಿದಾಗ ನಿಜಕ್ಕೂ ಇಂಥ ಸಾಧಕರು ಇದ್ದಾರಲ್ಲ ಎಂಬ ಹೆಮ್ಮೆ.ಮಳೆ ಬಂದಂತಹ ಸಂದರ್ಭದಲ್ಲಿ ಇಡೀ ಮನೆ ಸೋರುತಿತ್ತು,ಯಾರೂ ಕೂಡ ಇವರ ಸಹಕಾರಕ್ಕೆ ಬರುತ್ತಿರಲಿಲ್ಲ, ಆಗ ಅನುಭವಿಸಿದ ಯಾತನೆ ಏನನ್ನಾದರೂ ಸಾಧಿಸಲೇಬೇಕೆಂದು ಮನಸ್ಸನ್ನು ಗಟ್ಟಿ ಮಾಡಿಕೊಂಡ ಕೆಚ್ಚೆದೆಯ ಕ್ರೀಡಾಪಟು.

ಊರಿನವರಿಂದ, ನೆಂಟರಿಷ್ಟರಿಂದ ನಿರೀಕ್ಷೆಯಂತೆ ಇವರಿಗೆ ಸಹಕಾರ ದೊರೆಯಲಿಲ್ಲ. 21 ವರ್ಷಗಳ ಕಾಲ ಗುಡಿಸಿಲಿನಲ್ಲಿ ವಾಸವಾಗಿದ್ದರು. 05 ವರ್ಷ ವಯಸ್ಸಿನವರಿದ್ದಾಗ ಇವರು ವಾಸ ಮಾಡುತ್ತಿದ್ದ ಗುಡಿಸಲಿಗೆ ಬೆಂಕಿ ಬಿದ್ದು ಎಲ್ಲಾ ಸುಟ್ಟು ಹೋಗುತ್ತದೆ ಇದನ್ನು ಗಮನಿಸಿದ ಪೋಷಕರು ಇವರ ಚಿಕ್ಕಪ್ಪನ ಮನೆಯಲ್ಲಿ ತಂಗುವಂತೆ ಹೇಳುತ್ತಾರೆ ತೊಡಲು ಬಟ್ಟೆ ಇಲ್ಲದ ಸಂದರ್ಭ ಇವರ ಶಾಲೆಯ ಶಿಕ್ಷಕರು ಇವರಿಗೆ ಮತ್ತು ಇವರ ಅಕ್ಕಂದಿರಿಗೆ ಬಟ್ಟೆಗಳನ್ನು ಕೊಡಿಸಿ ನೆರವಾಗುತ್ತಾರೆ.

ಹುಟ್ಟುತ್ತಲೇ ಇವರು ಕಣ್ಣು ಕಾಣಿಸದವರಾಗದೆ 07 ನೇ ತರಗತಿಯವರೆಗೆ ಅಲ್ಪಸ್ವಲ್ಪ ಕಣ್ಣು ಕಾಣಿಸುತ್ತಿದ್ದರು, ಪೋಷಕರು ಶಸ್ತ್ರ ಚಿಕಿತ್ಸೆ ಮಾಡಿಸಿದರು ಉಪಯೋಗಕ್ಕೆ ಬಾರದೆ ಮುಂದೆ ಸಂಪೂರ್ಣ ಅಂಧತ್ವಕ್ಕೆ ಒಳಗಾಗುತ್ತಾರೆ.

ಪಕ್ಕದ ಜಿಲ್ಲೆ ಚಿಕ್ಕಮಗಳೂರಿನ ಆಶಾಕಿರಣ ಅಂದರ ಶಾಲೆಗೆ ಸೇರಿಸಬೇಕೆಂಬ ತೀರ್ಮಾನಕ್ಕೆ ಬಂದರೂ ಸಹ ಸರಿಯಾದ ಮಾಹಿತಿ ಇರದೆ ಆ ಶಾಲೆ ಅನಾಥಾಶ್ರಮವೆಂಬ ಭಾವ ಪೋಷಕರದಾಗಿತ್ತು. ಒಮ್ಮೆ ಶಾಲೆಗೆ ಹೋಗಿ ಬರುವ ಸಂದರ್ಭ ಆಕ್ಸಿಡೆಂಟ್ ನಿಂದ ತಪ್ಪಿಸಿಕೊಂಡರು ತದನಂತರ ಪೋಷಕರಿಗೆ ತಿಳಿಹೇಳಿದ ಮೇಲೆ ಇವರನ್ನು ಅಲ್ಲಿ ಶಾಲೆಗೆ ದಾಖಲಾತಿ ಮಾಡಲಾಯಿತು.

ಎಂ.ಕೃಷ್ಣ ಅಂದ ಮಕ್ಕಳ ವಸತಿಯುತ ಪಾಠಶಾಲೆ ಹಾಸನದಲ್ಲಿ ಓದಿನ ಜೊತೆಗೆ ಬುಟ್ಟಿ ಎಣಿಯುವುದು ಕಲಿತರು ಆದರೆ ಇವರಿಗೆ ಸಂಗೀತ ಮತ್ತು ಕರಾಟೆ ಕಲಿಯುವ ಆಸೆ ಇಲ್ಲಿ ನೆರವೇರಲಿಲ್ಲ.

ವಾರ್ಷಿಕೋತ್ಸವಗಳಿಗೆ ಹಾಸನದಿಂದ ಚಿಕ್ಕಮಗಳೂರು ಶಾಲೆಗೆ ಬಂದಂತಹ ಸಂದರ್ಭದಲ್ಲಿ ಇಲ್ಲಿ ತಬಲ ಮತ್ತು ಕರಾಟೆ ಕಲಿಸುವುದು ಕೇಳಿ ಇಲ್ಲಿ ಸೇರಬೇಕೆಂಬ ಆಸೆ ಇವರಿಗೆ ಉಂಟಾಯಿತು.

ಇವರ ಹುಟ್ಟೂರು ಕೊರಟಗೆರೆ ಬೇಲೂರು ತಾಲೂಕು, ಹಾಸನ ಜಿಲ್ಲೆ. ತಂದೆ–ಗುರುರಾಜು, ತಾಯಿ–ಇಂದ್ರಮ್ಮ ಕೂಲಿ ಕೆಲಸವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಇವರಿಗೆ ತಮಗೆ ಜನಿಸಿದ 04 ಮಕ್ಕಳಲ್ಲಿ 03 ಹೆಣ್ಣು, 01 ಗಂಡು. ವಂಶೋದ್ಧಾರಕ ಸಂಪೂರ್ಣ ಅಂಧತ್ವಕ್ಕೆ ಒಳಗಾದನಲ್ಲ ಎಂಬ ಕೊರಗು ಕಾಡುತ್ತಲೇ ಇದೆ.

08 ನೇ ತರಗತಿಗೆ ಸೇರಿಕೊಂಡ ನಂತರ ದಿವಂಗತ ಗೋಪಾಲ್ ದೈಹಿಕ ಶಿಕ್ಷಣ ಶಿಕ್ಷಕರು ಇವರ ಚುರುಕುತನವನ್ನು ಗಮನಿಸಿ ಕ್ರಿಕೆಟ್ ಆಟಕ್ಕೆ ಸೇರಿಸಿಕೊಂಡು ಬೌಲಿಂಗ್ ಮಾಡಲು ತಿಳಿಸಿದರು ಇವರು




ಕರಾರುವಕ್ಕಾಗಿ ಉತ್ತಮ ಪ್ರದರ್ಶನ ನೀಡಿದ ಪರಿಣಾಮ ಕ್ರಿಕೆಟ್ ಕ್ರೀಡೆಯಲ್ಲಿ ಮುಂದುವರೆಯುವಂತೆ ಪ್ರೇರೇಪಿಸಿ ಹಲವು ಬಾರಿ ಜಿಲ್ಲಾ ತಂಡದ ಪ್ರತಿನಿಧಿಯಾಗಿ ರಾಜ್ಯಮಟ್ಟದಲ್ಲಿ ಭಾಗವಹಿಸಲು ಸಹಕಾರಿಯಾಯಿತು.

ಮುಂದೆ ನೀನು ಓಟಗಾರನಾಗು ಎಂದು ದೈಹಿಕ ಶಿಕ್ಷಕರು ಸಲಹೆ ನೀಡಿದರು ಹಿರಿಯ ಕ್ರೀಡಾಪಟುಗಳ ನೆರವಿನಿಂದ ಓಡಲು ಪ್ರಾರಂಭಿಸುತ್ತಾರೆ ಆದರೆ ದುರಾದೃಷ್ಟವಶಾತ್ ಗೋಪಾಲ್ ದೈವಾಧೀನರಾಗುತ್ತಾರೆ ನಂತರ ಮಂಜುನಾಥ್ ಸರ್ ರವರು ತರಬೇತಿ ನೀಡಲು ಆರಂಭಿಸುತ್ತಾರೆ.

ಪ್ರೌಢಶಾಲಾ ಶಿಕ್ಷಣ ಮುಗಿಸಿದ ನಂತರ ಪದವಿ ಪೂರ್ವ ಕಾಲೇಜಿಗೆ ಮೈಸೂರಿನಲ್ಲಿ ಸೇರಿಕೊಳ್ಳಲು ಇಚ್ಚಿಸುತ್ತಾರೆ ಆದರೆ ವಿದೇಶದಲ್ಲಿ ಓಡಲು ನಿನಗೆ ಪಾಸ್ಪೋರ್ಟ್ ಮಾಡಿಸಬೇಕಾಗಿದೆ ಬಾ ಎಂದು ಮಂಜುನಾಥ್ ಸರ್ ಕರೆಯುತ್ತಾರೆ ದೆಹಲಿಗೆ ಹೋದರು ಸಹ ಓಡಲು ಸಾಧ್ಯವಾಗಲಿಲ್ಲ ಆದರೆ ಸರ್ ರವರ ಪ್ರೇರಣೆ ಹಾಗೂ ದುಬೈನಲ್ಲಿ ಕ್ರೀಡಾಕೂಟ ನಡೆಯಲಿದೆ ಎಂಬ ಮಾಹಿತಿ ಸಿಕ್ಕ ನಂತರ ಆಸಕ್ತಿ ಇಮ್ಮಡಿಗೊಂಡು ತರಬೇತಿಯನ್ನು ಮುಂದುವರಿಸುತ್ತಾರೆ.

ಕಿತ್ತು ತಿನ್ನುವ ಬಡತನ, ಮನೆ ಕಟ್ಟಿಸಲೇಬೇಕೆಂಬ ಕಿಚ್ಚು ಇವರನ್ನು ಕಲಿಯುವಂತೆ ಮಾಡಿತು ಕ್ರೀಡೆ ನನ್ನ ಕೈ ಹಿಡಿದೇ ಹಿಡಿಯುತ್ತದೆ ಎಂಬ ಭರವಸೆ ಇವರ ಮನದಲ್ಲಿ ಮನೆ ಮಾಡಿತು.

ಜೀವನಕ್ಕೆ ದಾರಿ ಮಾಡಿಕೊಳ್ಳಲೇಬೇಕಾದ ಹಠ ಮೂಡಿದ್ದಲ್ಲದೆ, ಹಸಿವು ಪದೇ ಪದೇ ನೀನೇನಾದರೂ ಸಾಧಿಸಲೇ ಬೇಕೆಂಬ ಕಿಚ್ಚು ಇವರ ಮನದಲ್ಲಿ ಬಲವಾಗಿ ಮೂಡಿಸಿತು.

ಸಂಪೂರ್ಣ ಅಂದತ್ವವುಳ್ಳ ಓಟಗಾರರಿಗೆ ಗೈಡ್ ರನ್ನರ್ಗಳ ಅವಶ್ಯಕತೆ ಇದ್ದೇ ಇರುತ್ತದೆ ಇಂತಹ ಸಂದರ್ಭದಲ್ಲಿ ರಾಹುಲ್ ಹಾಗೂ ಸತ್ಯನಾರಾಯಣ ಸರ್ ಅಂತರಾಷ್ಟ್ರೀಯ ಪ್ಯಾರ ಅಥ್ಲೆಟಿಕ್ಸ್ ತರಬೇತುದಾರರು ಇವರ ನೆರವಿಗೆ ಬರುತ್ತಾರೆ ಇವರ ಸಹಕಾರ ಮತ್ತು ಮಾರ್ಗದರ್ಶನದ ಪರಿಣಾಮ ಹಲವಾರು ಕ್ರೀಡಾ ಸಾಧನೆಗಳನ್ನು ಮಾಡಿರುತ್ತಾರೆ ಅವುಗಳಲ್ಲಿ ಪ್ರಮುಖವಾಗಿ

### ಅಂತರಾಷ್ಟ್ರೀಯ ಕ್ರೀಡಾಕೂಟ

1– 2017(ದುಬೈ)ಏಷ್ಯನ್ ಯೂತ್ ಪ್ಯಾರಾ ಗೇಮ್ಸ್ ನಲ್ಲಿ 1500 ಮೀಟರ್ ಓಟದಲ್ಲಿ ಚಿನ್ನ.

2– 2018 ಇಂಡೋನೇಷಿಯಾ (ಜರ್ಕಾತ) ಪ್ಯಾರಾ ಏಷ್ಯನ್ ಗೇಮ್ಸ್ ನಲ್ಲಿ 1500 ಮೀಟರ್ ಓಟದಲ್ಲಿ ಭಾಗವಹಿಸುವಿಕೆ.

3– 2019(ಬೆಂಗಳೂರು)ಸಾಯ್ ಸೆಂಟರ್ನಲ್ಲಿ ನಡೆದ ಕ್ರೀಡಾಕೂಟದಲ್ಲಿ 1500 ಮತ್ತು 5000 ಮೀಟರ್ ಓಟದಲ್ಲಿ ತಲಾ ಒಂದೊಂದು ಕಂಚು.

4– 2022 (ದುಬೈ)ನಲ್ಲಿ ನಡೆದ ಕ್ರೀಡಾಕೂಟದಲ್ಲಿ 1500 ಮತ್ತು 5000 ಮೀಟರ್ ಓಟದಲ್ಲಿ ತಲಾ ಒಂದೊಂದು ಕಂಚು.

5– 2023 (ಬೆಂಗಳೂರು)ಗ್ರಾಂಡ್ ಫಿಕ್ಸ್ ನಲ್ಲಿ 1500 ಮೀಟರ್ ಓಟದಲ್ಲಿ ಬೆಳ್ಳಿ,5000 ಮೀಟರ್ ಓಟದಲ್ಲಿ ಕಂಚು.

### ರಾಷ್ಟ್ರಮಟ್ಟದ ಕ್ರೀಡಾ ಸಾಧನೆಗಳು

1– 2018 (ನವದೆಹಲಿ)ಯಲ್ಲಿ ನಡೆದ 21ನೇ ಐ,ಬಿ,ಎಸ್,ಎ. ಕ್ರೀಡಾಕೂಟದಲ್ಲಿ 1500 ಮೀಟರ್ ಓಟದಲ್ಲಿ ಚಿನ್ನದ ಪದಕ.

2– 2021 (ಬೆಂಗಳೂರು– ಕರ್ನಾಟಕ) 19 ನೇ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್ಶಿಪ್ ನಲ್ಲಿ 1500 ಮತ್ತು 5000 ಮೀಟರ್ ಓಟದಲ್ಲಿ ತಲಾ ಒಂದೊಂದು ಬೆಳ್ಳಿ.

3– 2022 ಮಾರ್ಚ್ ನಲ್ಲಿ ನಡೆದ 20ನೇ ಪ್ಯಾರಾ ನ್ಯಾಷನಲ್ ಅಥ್ಲೆಟಿಕ್ ಚಾಂಪಿಯನ್ಶಿಪ್ ಭುವನೇಶ್ವರದಲ್ಲಿ 1500 ಮತ್ತು 5000 ಮೀಟರ್ ಓಟದಲ್ಲಿ ತಲಾ ಒಂದೊಂದು ಬೆಳ್ಳಿ ಪದಕ ಪಡೆದಿರುತ್ತಾರೆ

4– 2022 (ನವದೆಹಲಿ)22ನೇ ಐ,ಬಿ,ಎಸ್,ಎ. ಕ್ರೀಡಾಕೂಟದಲ್ಲಿ 1500 ,5000 ಮತ್ತು 4*100 ರಿಲೇ ಓಟಗಳಲ್ಲಿ ತಲಾ ಒಂದೊಂದು ಚಿನ್ನದ ಪದಕವನ್ನು ಪಡೆದಿರುತ್ತಾರೆ.

5– 2023 (ಮಾರ್ಚ್–ಪುಣೆ) 22ನೇ ನ್ಯಾಷನಲ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್ಶಿಪ್ ನಲ್ಲಿ 1500 ಮತ್ತು 5000 ಮೀಟರ್ ಓಟದಲ್ಲಿ ತಲಾ ಒಂದೊಂದು ಬೆಳ್ಳಿ ಪದಕ ಪಡೆದಿರುತ್ತಾರೆ.

ಸಾಧನೆ ಸಾಧಕನ ಸ್ವತ್ತೆ ಹೊರತು ಸೋಮಾರಿಯ ಸ್ವತ್ತಲ್ಲ



ಅಂದಮಾತ್ರಕ್ಕೆ ಸಾಧಕನೇ ಎಲ್ಲವನ್ನು ಮಾಡಲು ಸಾಧ್ಯವಿಲ್ಲ ಸಮಾಜ ಹಾಗೂ ಸರ್ಕಾರಗಳು ನಮ್ಮಂತವರಿಗೆ ಸಹಾಯ ಮಾಡಬೇಕು ಆರ್ಥಿಕವಾಗಿ ನಾವು ಸಬಲರಾದರೆ ಮುಂದಿನ ದಿನಗಳಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಲು ಸಾಧ್ಯ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper

ಕ್ರೀಡಾ ಕ್ಷೇತ್ರ ನನ್ನ ಕೈ ಬಿಡಲಿಲ್ಲ, ನಾನು ಅಂದುಕೊಂಡಂತೆ ದೇಶ ಮತ್ತು ರಾಜ್ಯಕ್ಕೆ ಕೀರ್ತಿಯನ್ನು ಹೆಚ್ಚಿಸಿರುತ್ತೇನೆ ಇದರ ಪರಿಣಾಮವಾಗಿ ಆರ್ಥಿಕವಾಗಿ ಸ್ವಲ್ಪ ಸದೃಢನಾಗಿ ಮನೆಯನ್ನು ಕಟ್ಟಲಾರಂಭಿಸಿದ್ದೇನೆ ಹಿರಿಯ ಅಕ್ಕನಿಗೆ ಮದುವೆ ಮಾಡಿಸಿದ್ದೇನೆ ಎಲ್ಲರನ್ನು ದಡ ಸೇರಿಸುವ ಜವಾಬ್ದಾರಿ, ಅಪ್ಪ ಅಮ್ಮನನ್ನು ಸಾಕುವ ಹೊಣೆ ನನ್ನದೇ ನಿಮ್ಮೆಲ್ಲರ ಆಶೀರ್ವಾದವಿದ್ದರೆ ನಾನು ಅದನ್ನು ಮಾಡಿ ತಿರುತ್ತೇನೆ ಎಂದು ಹೇಳುತ್ತಾರೆ ಕೇಶವಮೂರ್ತಿ.

ಸರ್ಕಾರ ಕ್ರೀಡಾಪಟುಗಳಿಗೆ ಹೆಚ್ಚಿನ ಮೀಸಲಾತಿ, ಹೆಚ್ಚೆಚ್ಚು ಕ್ರೀಡಾ ತರಬೇತಿ ಕೇಂದ್ರಗಳನ್ನು ತೆರೆದು ನಮ್ಮಂತವರಿಗೆ ಆಶ್ರಯ ನೀಡಬೇಕು.ಉತ್ತಮ ಆಹಾರ, ವೈಜ್ಞಾನಿಕ ಸಲಕರಣೆಗಳೊಂದಿಗೆ ನಮ್ಮನ್ನು ನಾವು ಕ್ರೀಡೆಗೆ ತೊಡಗಿಸಿಕೊಳ್ಳಲು ಸಹಕಾರ ನೀಡಬೇಕು.

ಇಂದಿನ ಯುವ ಪೀಳಿಗೆ ತಮ್ಮ ಸಮಯವನ್ನು ಹಾಳು ಮಾಡದೆ ಸಾಧನೆಗೆ ತೊಡಗಿಸಿಕೊಳ್ಳಬೇಕು.

ಯಾವುದೇ ಅಂಗನ್ಯೂನ್ಯತೆಯು ದೊಡ್ಡದಲ್ಲ, ಸಾಧಿಸುವ ಛಲ, ಕಠಿಣಶ್ರಮ ನಿಮ್ಮನ್ನು ನೀವು ನಿಮಗಿಷ್ಟವಾದ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಿಕೆ ಗುರಿಯೆಡೆಗೆ ನಡೆಸಬಲ್ಲದು, ದಡ ಸೇರಿಸಬಲ್ಲದು ಎಲ್ಲರೂ ಏನಾದರೂ ಒಂದು ಸಾಧನೆಯಲ್ಲಿ ತೊಡಗಿಸಿಕೊಳ್ಳಿ ಎಂದು ಹೇಳುತ್ತಾರೆ ಕೇಶವಮೂರ್ತಿ.

ಹಾಸನವೆಂದರೆ ಶೂರತ್ವ, ಹೊಯ್ಸಳರಾಳಿದ ನಾಡು, ಕೆಚ್ಚೆದೆಯ ಬೀಡು ಇಂತಹ ಮಣ್ಣಿನ ಸೊಗಡಲ್ಲಿ ಬೆಳೆದ ಇವರು ನಿಜಕ್ಕೂ ಕೆಚ್ಚೆದೆಯ ಹಾಸನದ ಕ್ರೀಡಾ ಕಲಿ ಇವರ ಆಸೆಯಂತೆ ಒಲಂಪಿಕ್ಸ್ ನಲ್ಲಿ ಗೆದ್ದು ಬರಲಿ ಎಂದು ಎಲ್ಲರೂ ಇವರಿಗೆ ಶುಭ ಹಾರೈಸೋಣ....

ಓದುಗರಲ್ಲಿ ನನ್ನದೊಂದು ವಿನಮ್ರ ಮನವಿ ನಿಮಗೆ ಪರಿಚಯವಿರುವ ಕ್ರೀಡಾ ಸಾಧಕರಿದ್ದರೆ ದಯಮಾಡಿ ನನ್ನ ವೈಯಕ್ತಿಕ ಮೊಬೈಲ್ ಸಂಖ್ಯೆಗೆ ಮಾಹಿತಿ ನೀಡಿ ಅವರ ಸಾಧನೆಯನ್ನು ಸಮಾಜಕ್ಕೆ ತಿಳಿಸೋಣ.


# ಕೊಟ್ಟ ಮಾತಿನಂತೆ ಗ್ಯಾರಂಟಿ ಈಡೇರಿಸಿದ್ದೇವೆ: ಸಿಎಂ

## ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ

■ ಬೆಂಗಳೂರು:

ಕೊಟ್ಟ ಮಾತಿನಂತೆ ನಡೆದುಕೊಂಡು ನಿಮ್ಮ ಓಟಿಗೆ ಗೌರವ ತಂದುಕೊಟ್ಟವರು ನಾವು. ಬಿಜೆಪಿ ಕೊಟ್ಟ ಮಾತಿನಂತೆ ನಡೆದುಕೊಂಡಿದೆಯಾ ? ನಿಮ್ಮ ಖಾತೆಗಳಿಗೆ ನೇರವಾಗಿ ಹಣ ಜಮೆ ಮಾಡುತ್ತಿರುವವರು ನಾವಾ? ಬಿಜೆಪಿಯಾ? ಇದನ್ನು ನಿಮ್ಮ ಹೃದಯಕ್ಕೆ ಕೇಳಿಕೊಂಡು ತೀರ್ಮಾನಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು. ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ ಆಯೋಜಿಸಿದ್ದ ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿ, ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಿ ಮಾತನಾಡಿದರು.

ಅನ್ನಭಾಗ್ಯ, ಕೃಷಿಭಾಗ್ಯ, ಕ್ಷೀರಧಾರೆ ಸೇರಿ ಹತ್ತಾರು ಭಾಗ್ಯಗಳು, ಐದು ಗ್ಯಾರಂಟಿಗಳನ್ನು ಜಾರಿ ಮಾಡಿ ಪ್ರತೀ ತಿಂಗಳು ನಾವು ಕೊಟ್ಟ ಮಾತಿನಂತೆ ನಿಮ್ಮ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡುತ್ತಿರುವವರು ನಾವು. ಉಚಿತ ಬಸ್, ಉಚಿತ ವಿದ್ಯುತ್ ಕೊಡುತ್ತಿರುವವರು ನಾವು . ತಿಂಗಳಿಗೆ 2 ಸಾವಿರ ಪ್ರತೀ ಮಹಿಳೆಯ ಖಾತೆಗೆ



ಹಾಕುತ್ತಿರುವವರು ನಾವು ಎನ್ನುತ್ತಾ, ನಾವು ಮಾಡಿದ ಕೆಲಸಕ್ಕೆ ಕೂಲಿ ಕೊಡಿ ಎಂದು ಕೈ ಮುಗಿದು ಕೇಳಿದರು.

ಆದರೆ ಮೋದಿಯವರು ವಿದೇಶದಿಂದ ಕಪ್ಪು ಹಣ ತಂದು ಪ್ರತಿಯೊಬ್ಬ ಭಾರತೀಯರ ಖಾತೆಗೆ 15 ಲಕ್ಷ ಹಣ ಹಾಕ್ತೀವಿ ಅಂದರು. ಮೋದಿಯವರು ಈ ಹಣ ಹಾಕಿದ್ರಾ ನಿಮ್ಮ ಖಾತೆಗೆ? ವಿದೇಶದಿಂದ ಕಪ್ಪು ಹಣ ತಂದರಾ ಎಂದು ನೆರೆದಿದ್ದ ಜನರನ್ನು ಪ್ರಶ್ನಿಸಿದರು.

ಅಚ್ಛೆದಿನ್ ಆಯೆಗಾ ಎಂದು ಡೈಲಾಗ್ ಹೊಡೆದದ್ದು ಮೋದಿಯವರು. ಆದರೆ ಪೆಟ್ರೋಲ್, ಡೀಸೆಲ್ ಬೆಲೆ, ಗ್ಯಾಸ್ ಬೆಲೆ, ರಸಗೊಬ್ಬರದ ಬೆಲೆ ಎಲ್ಲಾ ಏರಿಸಿ ಏರಿಸಿ ಬಡವರ, ಮಧ್ಯಮ ವರ್ಗದವರು ಬದುಕುವುದೇ ದುಸ್ತರ ಮಾಡಿಬಿಟ್ಟರು ಎಂದು ಒಂದೊಂದಾಗಿ ವಿವರಿಸಿದರು.

BJP ಸಮಾಜದಲ್ಲಿರುವ ಅಸಮಾನತೆಯ ಮಹಾನ್ ಪೋಷಕರು. ಬಡವರು ಇನ್ನಷ್ಟು ಬಡವರಾಗುತ್ತಲೇ ಹೋಗಬೇಕು, ಮಧ್ಯಮ ವರ್ಗದವರು ಬಡತನಕ್ಕೆ ಜಾರಬೇಕು ಎನ್ನುವುದು ಬಿಜೆಪಿಯ ಅಜೆಂಡಾ. ಹೀಗಾಗಿ ಮಧ್ಯಮ ವರ್ಗದವರು, ಬಡವರಿಗೆ ಕಾಂಗ್ರೆಸ್ ಸರ್ಕಾರ ಕೊಡುವ ಎಲ್ಲಾ ಕಾರ್ಯಕ್ರಮಗಳನ್ನೂ ವಿರೋಧಿಸುತ್ತಾರೆ, ಫಲಾನುಭವಿಗಳನ್ನು ಅವಮಾನಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ಸರ್ಕಾರ ಸಂವಿಧಾನದ ಆಶಯಗಳಂತೆ ಸರ್ವರ ಕಲ್ಯಾಣದ ಕಾರ್ಯಕ್ರಮ ರೂಪಿಸುತ್ತಿದೆ. ನಮ್ಮ ಸಂವಿಧಾನ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಮಹಿಳೆಯರು, ಯುವ ಸಮೂಹ ಸೇರಿ ಸರ್ವರಿಗೂ ಅವಕಾಶಗಳನ್ನು ಕೊಡುತ್ತದೆ. ಈ ಅವಕಾಶಗಳನ್ನು ನಾಶ ಮಾಡಬೇಕು ಎನ್ನುವ ಕಾರಣಕ್ಕೆ ಬಿಜೆಪಿ ನಮ್ಮ ಸಂವಿಧಾನವನ್ನು ಬದಲಾಯಿಸಿ ಅವರ ಮನುಸ್ಮೃತಿ ಪರವಾಗಿ ಮಾತನಾಡುತ್ತಿದೆ. ಬಿಜೆಪಿಯ ಹಾಲಿ ಸಂಸದ, ಮಾಜಿ ಕೇಂದ್ರ ಸಚಿವ ಅನಂತ ಕುಮಾರ ಹೆಗ್ಡೆ ಅವರು ಪದೇ ಪದೇ ಸಂವಿಧಾನ ಬದಲಾಯಿಸುವ ಮಾತಾಡುತ್ತಿದ್ದಾರೆ.

ಇವರು ಬಹಿರಂಗವಾಗಿ ಸಂವಿಧಾನ ಬದಲಾಯಿಸುವ ಮಾತಾಡಿದರೂ ಪ್ರಧಾನಿ ಮೋದಿಯವರಾಗಲೀ, ಬಿಜೆಪಿ ಹೈ ಕಮಾಂಡ್ ಆಗಲಿ ಇದನ್ನು ವಿರೋಧಿಸಿಲ್ಲ. ಹೀಗಾಗಿ ಬಿಜೆಪಿಯ ಅಜೆಂಡಾವನ್ನು ನಾಡಿನ ಜನತೆ ಅರ್ಥಮಾಡಿಕೊಳ್ಳಬೇಕು. ನಮ್ಮ ಸಂವಿಧಾನ ಹೋದರೆ ನಾಡಿನ ಜನರ ಮಕ್ಕಳ ಭವಿಷ್ಯಕ್ಕೆ, ಅವರ ಬದುಕುವ–ದುಡಿಯುವ ಅವಕಾಶಗಳಿಗೆ ಕಂಟಕ ಬರುತ್ತದೆ ಎಂದು ಎಚ್ಚರಿಸಿದರು.

ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಜನಿಸುತ್ತೇನೆ ಎಂದಿದ್ದ ಮಾಜಿ ಪ್ರಧಾನಿ ದೇವೇಗೌಡರು ಈಗ ಬಿಜೆಪಿ ಜತೆ ಸೇರಿಕೊಂಡು ಬಿಜೆಪಿ ಮತ್ತು ಮೋದಿಯನ್ನು ಹೊಗಳುತ್ತಿದ್ದಾರೆ. ಇವರನ್ನು ಹೇಗೆ ನಂಬುತ್ತೀರಿ ಎಂದು ಪ್ರಶ್ನಿಸಿದರು.

ಮೊನ್ನೆ ನಡೆದ ವಿಧಾನಪರಿಷತ್ ಚುನಾವಣೆ ನಾಳೆ ಬರಲಿರುವ ಲೋಕಸಭಾ ಚುನಾವಣೆಯ ದಿಕ್ಸೂಚಿ ಎಂದು ಹೆಚ್.ಡಿ.ಕುಮಾರಸ್ವಾಮಿಯವರು ಹೇಳಿದ್ದರು. ಆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ದೋಸ್ತಿಯನ್ನು ಸೋಲಿಸಿ ಕಾಂಗ್ರೆಸ್ ಪಕ್ಷದಿಂದ ಪುಟ್ಟಣ್ಣ ಜಯಭೇರಿ ಭಾರಿಸಿದ್ದಾರೆ. ಹೀಗಾಗಿ ಕುಮಾರಸ್ವಾಮಿ ಅವರ ಮಾತಿನಂತೆ ಲೋಕಸಭೆ ಚುನಾವಣೆಯಲ್ಲೂ ಬಿಜೆಪಿ–ಜೆಡಿಎಸ್ ಸೋಲುತ್ತದೆ. ಕಾಂಗ್ರೆಸ್ ಗೆಲ್ಲುತ್ತದೆ ಎಂದು ಖಚಿತವಾಗಿ ನುಡಿದರು.

## ಕವಿ ಮನಸು

### ಹೆಣ್ಣಿನ ಪಾತ್ರ ಜೀವನದಲ್ಲಿ

ಅಕ್ಕನಾಗಿ ತಾಯಿಯ ಸ್ಥಾನ ತುಂಬುತ್ತಾಳೆ
ತಮ್ಮ, ತಂಗಿಯರಿಗೆ
ತಂಗಿಯಾಗಿ ಅಣ್ಣನ ಪ್ರೀತಿ ಅಷ್ಟೇ
ಬಯಸುವುದಿಲ್ಲ
ಅಣ್ಣನ ಮಾನ, ಸ್ಥಾನಕ್ಕಾಗಿ ಪ್ರಾರ್ಥಿಸುತ್ತಾಳೆ
ದೇವರಲ್ಲಿ

ಮಗಳಾಗಿ ಹುಟ್ಟಿದ ಮನೆಯ ಅಂದವ
ಹೆಚ್ಚಿಸುವಳು
ಕೊಟ್ಟ ಮನೆಯ ದೀಪವಾಗಿ ಬಾಳುವಳು
ಅಷ್ಟೇ ಅಲ್ಲ ಮದುವೆ ಯಾದರೂ ತವರಿನ
ಏಳ್ಗೆಯ ಬಗ್ಗೆಯೇ ಸದಾ ಯೋಚಿಸುವಳು

ಸೊಸೆಯಾಗಿ ಅತ್ತೆ, ಮಾವನವರಿಗೆ
ಮಗಳಾಗುವಳು
ಅತ್ತಿಗೆಯಾಗಿ ನಾದಿನಿ ಮೈದುನರ
ಸ್ನೇಹಿತೆಯಾಗುವಳು
ಸಹೋದರಿಯಾಗುವಳು
ಪ್ರತಿಯೊಂದು ಪಾತ್ರವನ್ನು ಅಚ್ಚುಕಟ್ಟಾಗಿ
ನಿಭಾಯಿಸುವಳು

ತಾಯಿಯ ಪಾತ್ರದ ಬಗ್ಗೆ ಏನು
ಹೇಳುವುದು
ಈ ಎಲ್ಲಾ ಸಂಬಂಧಗಳಿಗಿಂತ ಈ ಎಲ್ಲಾ
ಪಾತ್ರಗಳಿಗಿಂತ ಒಂದು ಹೆಜ್ಜೆ ಮುಂದೆ ಅಲ್ಲ
ತಾಯಿಯ ಪ್ರೀತಿ ಎಲ್ಲರಿಗಿಂತ
ಒಂಬತ್ತು ತಿಂಗಳು ಜಾಸ್ತಿ ಇರುವುದು

– **ನೂರ್ ಜಹಾನ್** ಹೊಸಪೇಟೆ

### ಹಿತ

ಮಗುವಿಗೆ ತಾಯಿಯ ಮಡಿಲು ಹಿತ
ಕಟು ಸತ್ಯವ ಹೇಳಿದರೆ ಎಲ್ಲರಿಗೂ ಅಹಿತ
ಜೀವನವು ಸುಖ ದುಃಖದ ಸಂಮಿಳಿತ
ಬದುಕಬೇಕು ಎಲ್ಲ ಜಂಜಾಟದ ಸಹಿತ

ನವಜೋಡಿಗೆ ಹೊಸತರಲಿ ಎಲ್ಲವೂ
ಹಿತವು
ಯಾವ ತಪ್ಪುಗಳು ಕಣ್ಣಿಗೆ ಕಾಣವು
ಸಮಯ ಕಳೆದಂತೆ ಶುರುವಾಗುವುದು
ಕಿತ್ತಾಟವು
ಹಿತವಾಗಿರುವುದೆಲ್ಲಾ ಅಹಿತದಂತೆ
ಕಾಣುವವು

ಋತುಮಾನಗಳು ಕಾಲಕ್ಕೆ ತಕ್ಕಂತೆ ಇದ್ದರೆ
ಹಿತ
ಇಲ್ಲವಾದರೆ ಎದುರಿಸಬೇಕು ಪ್ರಕೃತಿಯ
ವಿಕೋಪದ ಮಾರುತ

– **ಚೇತನ ಭಾರ್ಗವ**

# ನಾ ಕಂಡಂತೆ ಪ್ರಸ್ತುತ ಸಮಾಜದಲ್ಲಿ... ಈ ಶತಮಾನದ ಮಾದರಿ ಹೆಣ್ಣು....



ಜೀವನದ ಪ್ರತೀ ಮಜಲಿನಲ್ಲಿಯೂ ಪ್ರಬುದ್ಧತೆಯ ಪಾತ್ರ ಅವಳದ್ದು. ತಾಯಿಯಾಗಿ ಸಹೋದರಿಯಾಗಿ, ಗೆಳತಿಯಾಗಿ, ಮಡದಿಯಾಗಿ, ಅತ್ತೆಯಾಗಿ, ನಾದಿನಿ –ಅತ್ತಿಗೆಯಾಗಿ, ಸೊಸೆಯಾಗಿ ಮನೆ ಮನಗಳ ಬೆಳಗುವ ನಂದಾದೀಪ ಅವಳು. ಬದಲಾದ ಕಾಲಘಟ್ಟದಲ್ಲಿ ಆಕೆ ಕೇವಲ ಮನೆಗೆ ಸೀಮಿತವಾಗಿರದೆ, ಸಾಮಾಜಿಕ, ರಾಜಕೀಯ, ಕಲಾಕ್ಷೇತ್ರದ ಚಟುವಟಿಕೆಗಳಲ್ಲಿ ಉತ್ತು೦ಗದ ಸ್ಥಾನದಲ್ಲಿ ಇದ್ದು, ಆರ್ಥಿಕವಾಗಿ ಮಾತ್ರವಲ್ಲದೆ, ಅಕ್ಷರ ಲೋಕವನ್ನ ಪ್ರವೇಶಿಸಿ ತನ್ನ ವ್ಯಕ್ತಿತ್ವವನ್ನ ತಾನೇ ರೂಪಿಸಿಕೊಳ್ಳುವಲ್ಲಿ ಸಬಲಳು.

ಪ್ರಾಚೀನಕಾಲದಲ್ಲಿ ಸಂಪ್ರದಾಯ ಬದ್ಧವಾಗಿ ಉಡುಗೆ ತೊಡುಗೆ ತೊಟ್ಟು ತಲೆ ತುಂಬಾ ಹೂವ ಮುಡಿದು, ಹಣೆಗೆ ದೊಡ್ಡ ಬಿಂದಿ ಇಟ್ಟು, ಕೈ ತುಂಬಾ ಬಳೆ ತೊಟ್ಟರೆ ಮಾತ್ರ ಮಾದರಿ ಹೆಣ್ಣು ಎಂಬ ಪರಿಕಲ್ಪನೆ ಇತ್ತು. ಆದರೆ ಪ್ರಸ್ತುತ ಸಮಾಜದಲ್ಲಿ ಉಡುಗೆ ತೊಡುಗೆಗಳಿಂದ ಮಾತ್ರ ಒಂದು ಹೆಣ್ಣನ್ನ "ಮಾದರಿ" ಎಂದು ಅಳೆಯುವ ಹಾಗಿಲ್ಲ ಎಂಬುದು ನನ್ನ ಅಭಿಪ್ರಾಯ. ಸುಮಾರು 22 ವರ್ಷಗಳ ಕಾಲ ಪೋಷಕರ ನೆರಳಲ್ಲಿ ಬೆಳೆದ ಹೆಣ್ಣು ಮದುವೆಯಾದ ತಕ್ಷಣ ಬದಲಾದ ಪರಿಸರಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಕೋಪ, ಜಗಳ, ಮನಸ್ತಾಪಗಳಿಲ್ಲದ ಸಂಸಾರ ಬಹುಷಃ ಪ್ರಪಂಚದಲ್ಲಿ ಕಾಣಲು ಕಷ್ಟಸಾಧ್ಯ. ಆದರೆ ಅದನ್ನೆಲ್ಲ ಸರಿತೂಗಿಸಿಕೊಂಡು ಹೊಂದಿಕೊಂಡು ತನ್ನ ಸಂಸಾರದ ನೌಕೆಯನ್ನ ಸಮರ್ಥವಾಗಿ ನಿಭಾಯಿಸುವ ಹೆಣ್ಣು ನನ್ನ ಪ್ರಕಾರ ಎಲ್ಲರಿಗೂ ಮಾದರಿ. ಯಾಕೆಂದರೆ ದಿನ ಬೆಳಗಾದರೆ ವಿಚ್ಛೇದನ.. ಓಡಿ ಹೋಗುವ ವಿಚಾರಗಳೇ ತುಂಬಿರುವ ಈ ದಿನಗಳಲ್ಲಿ ಸಂಸಾರವನ್ನ ಹೊಂದಾಣಿಕೆಯಿಂದ ನಿಭಾಯಿಸುವುದು ಒಂದು ಕಲೆ.

ಒಂದು ಮಗುವಿನ ಲಾಲನೆ ಪಾಲನೆಯಲ್ಲಿ ತಾಯಿಯ ಪಾತ್ರ ವರ್ಣಿಸಲಸಾಧ್ಯ. ನವಮಾಸ ತನ್ನ ಉದರದಲ್ಲಿರಿಸಿ ಮಗು ಹೊರಪ್ರಪಂಚಕ್ಕೆ ಕಾಲಿಟ್ಟಾಗ ಹಂತ ಹಂತವಾಗಿ ಪ್ರಾಪಂಚಿಕ ಜ್ಞಾನವನ್ನು ಉಣಬಡಿಸುತ್ತಾ ಸಮಾಜದ ಒಳಿತು ಕೆಡುಕುಗಳ ಬಗ್ಗೆ ತಿಳಿ ಹೇಳಿ, ಮಗುವನ್ನ ತಿದ್ದಿ ತೀಡಿ, ಸಂಸ್ಕಾರದ ನೀರೆರೆದು ಮಗುವನ್ನ

ಸತ್ಪ್ರಜೆಯಾಗಿಸಿ ಸಮಾಜಕ್ಕೆ ಕೊಡುಗೆ ನೀಡುವ ಜೊತೆ–ಜೊತೆಗೆ ತನ್ನ ಅಭ್ಯಾಸ ಹವ್ಯಾಸಗಳ ಮುಂದುವರಿಸಿ, ಆರ್ಥಿಕವಾಗಿ ಸಬಲಳಾಗುವ ನಿಟ್ಟಿನಲ್ಲಿ ಕೆಲಸಕ್ಕೆ ಹೋಗುವ ಅನಿವಾರ್ಯತೆ ಇದ್ದಲ್ಲಿ.. ಆರ್ಥಿಕವಾಗಿ ಕೂಡ ತನ್ನ ಕುಟುಂಬಕ್ಕೆ ಊರುಗೋಲಾಗಿ ನಿಂತು ಮನೆಯ ಕೆಲಸಗಳನ್ನ ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತ..ಎಲ್ಲಾ ಕಷ್ಟದ ಪರಿಸ್ಥಿತಿಗಳನ್ನ ಸಮರ್ಥವಾಗಿ ಎದುರಿಸುವ ಮಹಿಳೆ ಕೂಡ ಆದರ್ಶ ಪ್ರಾಯವೇ. ಹಾಗೆಂದು ತನ್ನ ಆಸೆ ಆಕಾಂಕ್ಷೆಯನ್ನ ಮೂಲೆಗಿರಿಸಿ ಕುಟುಂಬದ ನೆಮ್ಮದಿ ಸಂತೋಷಕ್ಕೋಸ್ಕರ ಪ್ರತೀ ದಿನವನ್ನ ಪಣವಾಗಿಟ್ಟು, ಮನೆ ಕೆಲಸಗಳನ್ನ ಅಚ್ಚುಕಟ್ಟಾಗಿ ನಿಭಾಯಿಸುತ್ತಾ, ಯಜಮಾನ ದುಡಿದ ದುಡ್ಡಲ್ಲಿ ಉಳಿತಾಯ ಮಾಡಿ ಅದನ್ನ ಕುಟುಂಬ ಕಷ್ಟ ಕಾಲಕ್ಕೆ ಬಳಸಿ,ಸಂಸ್ಕಾರವಂತ ಮಗುವನ್ನ ಸಮಾಜಕ್ಕೆ ಕೊಡುಗೆಯಾಗಿಸುವ ಪ್ರತೀ ಹೆಣ್ಣು ಮಾದರಿ.



ಲಕ್ಷ್ಮಿ ಗುರುರಾಜ್
ಪುತ್ತುರು

Scan For Digital Colourful
HAMPI TIMES E-paper

ಸಾಮಾಜಿಕ, ರಾಜಕೀಯ,ಕಲೆ, ಪ್ರತಿಭೆ, ಪ್ರೌಢಿಮೆಗಳಲ್ಲಿ ಅದೆಷ್ಟೇ ಎತ್ತರಕ್ಕೆ ಏರಿ ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಿಗೆ ಸಮವಾದ ಧೀಮಂತ ಬದುಕು ಕಟ್ಟಿಕೊಂಡ ಪ್ರತೀ ಹೆಣ್ಣು ಸಚ್ಚಾರಿತ್ರ್ಯ, ಸದ್ಬುದ್ಧಿ, ಸನ್ನಡತೆ, ಸಂಸ್ಕಾರ, ವಿನಯತೆಯನ್ನು ಮೈಗೂಡಿಸಿಕೊಂಡು ಬದುಕಿನ ನೇಗಿಲನ್ನ ತನ್ನ ಕುಟುಂಬದ ನೊಗದೊಂದಿಗೆ ಮುಂದುವರಿಸುವ ಪ್ರತೀ ಮಹಿಳೆ ದೇವತೆ. ಹಾಗೇ ತನ್ನ ಮೇಲಾಗುತ್ತಿರುವ ಹೆಣ್ಣು ಭ್ರೂಣ ಹತ್ಯೆ, ಅನಕ್ಷರತೆ,ಕಿರುಕುಳ ತಾರತಮ್ಯ, ದೌರ್ಜನ್ಯ ಮುಂತಾದ ಅಮಾನವೀಯ ಕೃತ್ಯಗಳ ಬಗ್ಗೆ ಅರಿವಿಗಳಾಗಿ ತನ್ನ ಹೆಣ್ಣುಮಕ್ಕಳಿಗೆ ಬಾಲ್ಯದಲ್ಲಿಯೇ ಅರಿವು ಮೂಡಿಸಿ, ಛಲದಿಂದ ಮೆಟ್ಟಿ ನಿಲ್ಲುವ ಕಾಳಿಯ ರೂಪದಿ ತೋರುವ ಹೆಣ್ಣು ಕೂಡ ಪೂಜನೀಯಳು.

ಒಂದು ಕಾಲದಲ್ಲಿ ಅಬಲೆಯಾಗಿದ್ದವಳು, ಗುಲಾಮಳಾಗಿದ್ದವಳು ಇಂದು ಓದು ಬರಹವೆಂಬ ಅಸ್ತ್ರವನ್ನು ಹಿಡಿದು ಪುರುಷನ ಬಾಹುಬಂಧನದಿಂದ, ತೋಳತೆಕ್ಕೆಯಿಂದ ದೂರ ಹಾರಿ ಸ್ವತಂತ್ರವಾಗಿ ಸ್ವೇಚ್ಛೆಯಿಂದ ಹಾರಾಡುವ ಹಕ್ಕಿ ಆದರೆ ಹಾರಾಡುವ ಸಮಯದಿ ಪಾಶ್ಚಾತ್ಯ ಸಂಸ್ಕೃತಿಯ ದಾಸ್ಯಕ್ಕೆ ಒಳಗಾಗದೆ, ಸ್ತ್ರೀ ಸಮಾನತೆಯ ಹೆಸರಿನಲ್ಲಿ ಅಶಾಂತಿ, ಅಶಿಸ್ತು ತೋರುತ್ತಾ, ಸಾಂಸಾರಿಕ ಕಟ್ಟು ಪಾಡುಗಳಿಂದ ಸಂಪೂರ್ಣ ಹೊರಬಂದು ಮದ್ಯಪಾನ, ಧೂಮಪಾನಗಳನ್ನ ಮಾಡುತ್ತಾ ಅರೆ–ಬರೆ ಬಟ್ಟೆಗಳನ್ನ ತೊಟ್ಟು ತಾವು ಯಾವ ಪುರುಷರಿಗೂ ಕಡಿಮೆಯಿಲ್ಲ ಎಂಬ ಗೂಂಡಾಗಿರಿಯನ್ನ ದರ್ಪ ದೌಲತ್ತನ್ನ ಪ್ರದರ್ಶಿಸದೇ ತಾಳ್ಮೆ ಸಂಯಮದಿಂದ ನಮ್ಮ ದೇಶದ ಸಂಸ್ಕೃತಿಯ ಪ್ರತೀಕವಾಗಿ, ಭಾರತಮಾತೆಯ ರಾಯಭಾರಿಯಾಗಿ ಪ್ರತಿಬಿಂಬಿಸಿದರೆ ಹೆಣ್ಣೆಂಬ ತ್ಯಾಗಮಯಿಯನ್ನು, ಮಮತಾಮಯಿಯನ್ನು ವಿಶ್ವವೇ ಪೂಜಿಸಿ ಸಂಭ್ರಮಿಸುವುದರಲ್ಲಿ ಸಂದೇಹವಿಲ್ಲ... ಹಾಗೇ ಈ ಹೆಣ್ಣು ಪ್ರಸ್ತುತ ಸಮಾಜದಲ್ಲಿ ಈ ಶತಮಾನದ ಮಾದರಿ ಹೆಣ್ಣಾಗುವುದರಲ್ಲಿ ಸಂಶಯವೇ ಇಲ್ಲ...

## ಬೇಸಿಗೆಗೆ ನೀರು ಹರಿಸಿ

ಮೊದಲ ಪುಟದಿಂದ

ಜೊತೆಗೆ, ಸಿಂಗಟಾಲೂರು ಜಲಾಶಯದಿಂದ ನದಿಗೆ ನೀರು ಹರಿಸಬೇಕು ಎಂದು ಆಗ್ರಹಿಸಿದರು. ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳಲ್ಲಿ ಈ ಕುರಿತು ಚರ್ಚಿಸಲಾಗಿದ್ದು, ಕೂಡಲೆ ನೀರು ಹರಿಸುವ ಭರವಸೆ ನೀಡಿದ್ದಾರೆ. 5 ಕೋಟಿ ರೂ.ಗಳ ವೆಚ್ಚದಲ್ಲಿ ಪಟ್ಟಣದ ರಾಮನಗರದಲ್ಲಿರುವ ತೇರು ಬೀದಿ ಅಭಿವೃದ್ಧಿ ಕಾಮಗಾರಿ ಸೇರಿದಂತೆ, 17ನೇ ವಾರ್ಡ್, 2ನೇವಾರ್ಡ್‌ಗಳಲ್ಲಿ ಹಾಗೂ ವರದಾಪುರದಲ್ಲಿ ಅಂಗನವಾಡಿ ಕೇಂದ್ರಗಳ ಹಾಗೂ ಹಳೆ ಊರಿನ ಸ.ಮಾ.ಹಿ.ಪ್ರಾ.ಶಾಲೆಯ ಕಂಪ್ಯೂಟರ್ ಕೊಠಡಿಗಳ ಉದ್ಘಾಟನೆ ನೆರವೇರಿಸಿದರು. ಈ ವೇಳೆ ಜೆಡಿಎಸ್ ತಲೂಕು ಅಧ್ಯಕ್ಷ ವೈ. ಮಲ್ಲಿಕಾರ್ಜುನ, ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ, ವೈಧ್ಯರಾದ ಡಾ.ವಿನಯಸಿಂಹ, ಉದ್ಯಮಿಯಾದ ಮಾದವಿ ಚಿದ್ರಿ, ಚಿದ್ರಿ ಅನಿಲ್, ಪುರಸಭೆ ಸದಸ್ಯರಾದ ನಾಗರಾಜ್ ಜನ್ನು, ದೀಪಕ್ ಕಠಾರೆ, ಚೆನ್ನಮ್ಮ ಎಚ್.ಎಂ.ವಿಜಯಕುಮಾರ್, ಮಂಗಳ ರವೀಂದ್ರಗೌಡ, ಮಾಜಿ ಸದಸ್ಯ ಮೃತ್ಯುಂಜಯ ಬದಾಮಿ, ಎಸ್‌ಡಿಎಂಸಿ ಅಧ್ಯಕ್ಷ ಮಜ್ಜಿಗಿ ಬಿ.ವೀರೇಶ್, ಮುಖಂಡರಾದ ಬ್ಯಾಟಿ ನಾಗರಾಜ್, ಪ್ರಕಾಶ್ ಚಿತ್ತವಾಡ್ಗಿ, ಜೆ.ಎಂ.ಜಗದೀಶ, ಸರ್ದಾರ್ ಯಮನೂರಪ್ಪ, ಶಾಸಕರ ಆಪ್ತ ಸಹಾಯಕ ರಡ್ಡಿ ದೊಡ್ಡಬಸಪ್ಪ, ಪಿಡಬ್ಲೂಡಿ ಎಇಇ ಪುರುಷೋತ್ತಮ್, ಪುರಸಭೆ ಮುಖ್ಯಾಧಿಕಾರಿ ಪ್ರಭಾಕರ ಮತ್ತಿತರರು ಇದ್ದರು.

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– **ಜಾಹೀರಾತು ವ್ಯವಸ್ಥಾಪಕರು.**

# ಟಿಬಿ ಡ್ಯಾಂ ನೀರಿನ ಹೋರಾಟಕ್ಕೂ ಧ್ವನಿಯಾಗುವೆ
## ಕಾವೇರಿ, ತುಂಗಭದ್ರಾ ಎಂಬ ಭೇದ ನಮ್ಮಲ್ಲಿಲ್ಲ ಎಂದ ಶಿವಣ್ಣ




### ಭಾವುಕರಾದ ಶಿವರಾಜ್‌ಕುಮಾರ್

'ಕರಟಕ ದಮನಕ' ಚಿತ್ರದ ಪ್ರಮೋಷನ್‌ಗಾಗಿ ನಗರಕ್ಕೆ ಆಗಮಿಸಿದ್ದ ನಟ ಶಿವರಾಜ್ ಕುಮಾರ್ ಹಾಗೂ ಚಿತ್ರ ಸಾಹಿತಿ ಯೋಗರಾಜ್ ಭಟ್ ಅವರನ್ನು ಅಭಿಮಾನಿಗಳು ಬೈಕ್ ರ‍್ಯಾಲಿ ಮೂಲಕ ಸ್ವಾಗತಿಸಿದರು. ವಾಲ್ಮೀಕಿ ಸರ್ಕಲ್‌ನಿಂದ ಮೆರವಣಿಗೆಯಲ್ಲಿ ಆಗಮಿಸಿದ ಶಿವಣ್ಣ ಪುನೀತ್ ರಾಜ್‌ಕುಮಾರ್ ಸರ್ಕಲ್‌ನಲ್ಲಿ ಅಪ್ಪು ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಕೆಲಕ್ಷಣ ಭಾವುಕರಾದರು.

■ **ಹಂಪಿ ಟೈಮ್ಸ್ ಹೊಸಪೇಟೆ**

ಕಾವೇರಿ ಮಾತ್ರವಲ್ಲದೇ, ನಾಡಿನ ಎಲ್ಲ ಸಮಸ್ಯೆಗಳಿಗೆ ಸ್ಪಂದಿಸುತ್ತೇವೆ. ತುಂಗಭದ್ರಾ ಜಲಾಶಯದ ನೀರಿನ ಸಮಸ್ಯೆ ಎದುರಾದರೆ, ಈ ಭಾಗದ ಜನರ ಪರವಾಗಿ ಹೋರಾಟಕ್ಕೆ ಸಿದ್ಧ ಎಂದು ಹ್ಯಾಟ್ರಿಕ್ ಹಿರೋ ಶಿವರಾಜ್ ಕುಮಾರ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುಂಗಭದ್ರಾ ಜಲಾಶಯ ಕಲ್ಯಾಣ ಕರ್ನಾಟಕದ ಜೀವನಾಡಿಯಾಗಿದೆ. ತುಂಗಭದ್ರ ಜಲಾಶಯವನ್ನು ನೋಡುತ್ತಲೇ ಬೆಳೆದಿದ್ದೇನೆ. ಈಗಲೂ ಟಿಬಿ ಡ್ಯಾಂ ನೋಡಿದರೆ, ಕೆಲಕಾಲ ನಾನು ಮಂತ್ರಮುಗ್ದನಾಗುತ್ತೇನೆ. ಈ ಭಾಗಕ್ಕೆ ಬಂದಾಗಲೆಲ್ಲಾ ತುಂಗಭದ್ರಾ ಜಲಾಶಯ ನೋಡುವುದನ್ನು ಮೆರೆಯುವುದಿಲ್ಲ. ಅಷ್ಟರ ಮಟ್ಟಿಗೆ ಟಿಬಿ ಡ್ಯಾಂ ನಮ್ಮನ್ನು ಆವರಿಸಿದೆ. ಹೀಗಾಗಿ ಕಾವೇರಿ, ತುಂಗಭದ್ರಾ ಎಂಬ ಭೇದ ನಮ್ಮಲ್ಲಿಲ್ಲ. ನೀರಿಗಾಗಿ ನಡೆಯುವ ಯಾವುದೇ ಹೋರಾಟವಿರಲಿ ಮುಂಚೂಣಿಯಲ್ಲಿರಲು ಸಿದ್ಧ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಗೀತಾ ಶಿವರಾಜ್ ಕುಮರ್ ಅವರು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕಳೆದ ಬಾರಿ ಜೆಡಿಎಸ್‌ನಿಂದ ಈ ಬಾರಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ. ಪಕ್ಷ ಬೇರೆಯಾದರೂ ಗೀತಾ ಅವರನ್ನು ಜನರು ನೋಡುವ ಭಾವನೆ ಬೇರೆ. ಪಕ್ಷಾಂತರ ಮಾಡಿದ್ದರಿಂದ ಯಾವುದೇ ಗೊಂದಲಿವಿಲ್ಲ. ಸೋಲು– ಗೆಲುವು ಎಂಬುದು ಜನಾದೇಶಕ್ಕೆ ಬಿಟ್ಟಿದ್ದು. ಯಾವುದೇ ಪಕ್ಷದ ನಾಯಕರಿರಲಿ ನಮ್ಮ ಮನೆಯಲ್ಲಿ ಅವರಿಗೆ ಸಿಗಬೇಕಾದ ಗೌರವ ಸಿಕ್ಕೇ ಸಿಗುತ್ತದೆ ಎಂದು ಹೇಳಿದರು.

ನೀರನ್ನು ಕಾಪಾಡಬೇಕು. ಜಲ ಸಂರಕ್ಷಣೆ ಬಗ್ಗೆ ಯುವಜನರು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು. ಚಿತ್ರ ಸಾಹಿತಿ ಹಾಗೂ ನಿರ್ದೇಶಕ ಯೋಗರಾಜ್ ಭಟ್ ಇದ್ದರು.

## ಕರಟಕ ದಮನಕ ಪಂಚತಂತ್ರದ ತಿರುಳು ಎಂದ ಶಿವರಾಜ್ ಕುಮಾರ್

■ **ಮೊದಲ ಪುಟದಿಂದ**

ಒಟ್ಟೊಟ್ಟಿಗೆ ಕಾಣಿಸಿಕೊಂಡಿದ್ದಾರೆ. ಹೀಗಾಗಿ ಚಿತ್ರ ಜನರ ಮನ ಗೆಲ್ಲುತ್ತಿದೆ. ಎಲ್ಲ ಕನ್ನಡಿಗರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಥಿಯೇಟರ್‌ಗೆ ಬಂದು ಸಿನಿಮಾ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ರಾಕ್‌ಲೈನ್ ಬ್ಯಾನರ್ ಅಡಿ ಪ್ರಭುದೇವ, ಯೋಗರಾಜ್ ಭಟ್ ಹಾಗೂ ನಾನು ಇದೇ ಮೊದಲು. ಪ್ರೇಕ್ಷಕರಿಗೆ ಏನಾದರೂ ಹೊಸತನ ಚಿತ್ರ ನೀಡುವ ಹಂಬಲದಿಂದ ಒಟ್ಟಾಗಿದ್ದೇವೆ. ಅದರಂತೆ ನಿರೀಕ್ಷೆಗೂ ಮೀರಿ ಚಿತ್ರ ಮೂಡಿ ಬಂದಿದೆ ಎಂದರು. ನಿರ್ದೇಶಕ ಯೋಗರಾಜ್ ಭಟ್, ನಿರ್ಮಾಪಕ ಗುಜ್ಜಲ್ ಪುರುಷೋತ್ತಮ ಇದ್ದರು.

# ನಾಮಫಲಕಗಳಲ್ಲಿ ಕನ್ನಡ ಶೇ.60 ಕಡ್ಡಾಯ, ಪಾಲಿಸಿ
## ಜಿಲ್ಲಾಮಟ್ಟದ ಸಮಿತಿ ಸಭೆಯಲ್ಲಿ ಡಿಸಿ ಸೂಚನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ–2022 ಹಾಗೂ ತಿದ್ದುಪಡಿಯ ಅಧಿನಿಯಮ–2024ನ್ನು ಜಿಲ್ಲೆಯಾದ್ಯಂತ ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಜಿಲ್ಲಾಮಟ್ಟದ ಸಮಿತಿ ಸಭೆ ನಡೆಯಿತು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಮಾತನಾಡಿ, ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ–2024ಕ್ಕೆ 2024ರ ಫೆಬ್ರುವರಿ ತಿಂಗಳಲ್ಲಿ ರಾಜ್ಯಪಾಲರ ಒಪ್ಪಿಗೆ ದೊರೆತಿದೆ. ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಮತ್ತು ಮಂಜೂರಾತಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ, ಕೈಗಾರಿಕೆ ಮತ್ತು ವ್ಯವಹಾರ ಉದ್ಯಮಗಳು, ಟ್ರಸ್ಟಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಹೊಟೆಲಗಳು ಮುಂತಾದವುಗಳು ತಮ್ಮ ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ.60ರಷ್ಟು ಪ್ರದರ್ಶಿಸಲಾಗಿದೆ ಮತ್ತು ಕನ್ನಡ ಭಾಷೆಯು ನಾಮಫಲಕದ ಮೇಲ್ಭಾಗದಲ್ಲಿ ಪ್ರದರ್ಶಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಎಂದು ಈ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮ–2024ರಲ್ಲಿ ತಿಳಿಸಲಾಗಿದೆ.

ವಿಜಯನಗರ ಜಿಲ್ಲೆಯಾದ್ಯಂತ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ–2022 ಹಾಗೂ ತಿದ್ದಿಪಡಿ ಅಧಿನಿಯಮ–2024ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿಯನ್ನು ಜಾರಿಗೊಳಿಸಲು ವಿಜಯನಗರ ಜಿಲ್ಲೆಯ ಜಿಲ್ಲಾಮಟ್ಟದ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ. ಈ ಜಿಲ್ಲಾಮಟ್ಟದ ಸಮಿತಿಯು ಸಕ್ರಿಯವಾಗಿರಬೇಕು. ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ರಾಜ್ಯ ಸಮಿತಿಗೆ ನಿಗದಿತ ಅವಧಿಯೊಳಗೆ ಸಲ್ಲಿಸಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಸಿಇಒ ಸದಾಶಿವ ಪ್ರಭು ಬಿ., ಎಸ್ಪಿ ಶ್ರೀಹರಿಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಸಿದ್ದಲಿಂಗೇಶ ರಂಗಣ್ಣವರ ಹಾಗೂ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.


ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

**12–03–2024 – ಮಂಗಳವಾರ**

| | |
|---|---|
| ತಿಥಿ | : ದ್ವಿತಿಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೇವತಿ |
| ಯೋಗ | : ಶುಕ್ಲ |
| ಕರಣ | : ಕೌಲವ |
| ಸೂರ್ಯೋದಯ | : 06:39:34 |
| ಸೂರ್ಯಾಸ್ತ | : 18:33:47 |
| ರಾಹು | : 15:35–17:05 |
| ಯಮಘಂಡ | : 09:38–11:07 |
| ಗುಳಿಕ | : 12:37–14:06 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 11–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.54 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 2041 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.030 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1600.03 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 7887 ಕ್ಯುಸೆಕ್ |
| ಸಾಮರ್ಥ್ಯ | 21.560 ಟಿಎಂಸಿ |

# ನೀರಿನ ಬೇಡಿಕೆ ಇದ್ದಲ್ಲಿ ಪೂರೈಕೆಗೆ ಕ್ರಮ

## ಜಿಲ್ಲಾಧಿಕಾರಿ ದಿವಾಕರ ಹೇಳಿಕೆ । ವಿಜಯನಗರ ಜಿಲ್ಲೆಯ 333 ಗ್ರಾಮಗಳಲ್ಲಿ ಬೇಸಿಗೆಯಲ್ಲಿ ನೀರಿನ ಕೊರತೆ ಉದ್ಭವಿಸಬಹುದು ತಾಲೂಕುಗಳಲ್ಲಿ ಆರಂಭವಾಗಿವೆ ಬರಗಾಲದ ಸಹಾಯವಾಣಿ । ಜಿಲ್ಲೆಯಲ್ಲಿ 2,92,330 ಮೆಟ್ರಿಕ್ ಟನ್ ಮೇವು ಲಭ್ಯವಿದೆ

**ಹಂಪಿ ಟೈಮ್ಸ್ ಹೊಸಪೇಟೆ**

2023–24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯನಗರ ಜಿಲ್ಲೆಯ ಒಟ್ಟು 6 ತಾಲ್ಲೂಕುಗಳನ್ನು ಸರ್ಕಾರವು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿದ್ದು, ಜಿಲ್ಲೆಯಲ್ಲಿ ಬರಗಾಲ ನಿರ್ವಹಣೆಗಾಗಿ ಜಿಲ್ಲಾ ವಿಪತ್ತು ನಿರ್ವಾಹಣಾ ಪ್ರಾಧಿಕಾರದಿಂದ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

ಬರಗಾಲ ನಿರ್ವಹಣೆಗಾಗಿ ತೆಗೆದುಕೊಳ್ಳ ಬೇಕಾದ ಕ್ರಮಗಳ ಕುರಿತು ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಜೊತೆಗೆ ಒಟ್ಟು 13 ಜಿಲ್ಲಾ ವಿಪತ್ತು ನಿರ್ವಾಹಣಾ ಪ್ರಾಧಿಕಾರದ ಸಭೆಗಳನ್ನು ನಡೆಸಿ ಚರ್ಚಿಸಲಾಗಿದೆ.

ಕಳೆದ ವರ್ಷ ನ.6ರಂದು ಸರಕಾರದ ಆದೇಶದನ್ವಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಬರಗಾಲ ನಿರ್ವಾಹಣೆಗಾಗಿ ಮುಂಜಾಗ್ರತ ಕ್ರಮಗಳ ಕುರಿತು ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾದ ತಾಲ್ಲೂಕು ಟಾಸ್ಕ್ ಪೋರ್ಸ್‌ನ 19 ಸಭೆಗಳನ್ನು ಸಹ ನಡೆಸಲಾಗಿದೆ.

ಪ್ರಸ್ತುತ ಜಿಲ್ಲೆಯಲ್ಲಿ 2,92,330 ಮೆಟ್ರಿಕ್ ಟನ್ ಮೇವು ಲಭ್ಯವಿದ್ದು, ಇದನ್ನು 18 ವಾರಗಳವರೆಗೆ ಉಪಯೋಗಿಸಬಹುದಾಗಿದೆ. ಪಶು ಸಂಗೋಪನೆ ಇಲಾಖೆಯಿಂದ ಈಗಾಗಲೇ ಜಿಲ್ಲೆಗೆ 12,057 ಮೇವಿನ ಮಿನಿಕಿಟ್ಸ್ ಸರಬರಾಜಾಗಿದ್ದು, ಈ ಎಲ್ಲಾ ಕಿಟ್‌ಗಳನ್ನು ಒಟ್ಟು 12,044 ರೈತರಿಗೆ ವಿತರಿಸಲಾಗಿದೆ. ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಂತರ ರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಭಂದಿಸಿ ಆದೇಶಿಸಲಾಗಿದೆ. ಮೇವು ಖರೀದಿಸಲು 85 ಜನ ರೈತರು ಟೆಂಡರ್ ಮುಖಾಂತರ ಮೇವು ಮಾರಾಟ ಮಾಡಲು ಮುಂದೆ ಬಂದಿರುತ್ತಾರೆ.

**ಬೇಸಿಗೆ ಕಾಲದಲ್ಲಿ ನೀರಿನ ಕೊರತೆ ಉದ್ಭವಿಸಬಹುದಾದ ಗ್ರಾಮಗಳ ವಿವರ:** ಜಿಲ್ಲೆಯ 333 ಗ್ರಾಮಗಳಲ್ಲಿ ಮುಂಬರುವ ದಿನಗಳಲ್ಲಿ ನೀರಿನ ಕೊರತೆ ಎದುರಾಗುವ ಸಾಧ್ಯತೆ ಇದೆ. ಹೊಸಪೇಟೆ ತಾಲೂಕಿನಲ್ಲಿ 30 ಗ್ರಾಮಗಳು ಮತ್ತು 15 ವಾರ್ಡಗಳಲ್ಲಿ, ಹಡಗಲಿ ತಾಲ್ಲೂಕಿನಲ್ಲಿ 50 ಗ್ರಾಮಗಳು, ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 43 ಗ್ರಾಮ ಮತ್ತು 4 ವಾರ್ಡಗಳು, ಹರಪನಹಳ್ಳಿ ತಾಲ್ಲೂಕಿನಲ್ಲಿ 128 ಗ್ರಾಮ ಮತ್ತು 27 ವಾರ್ಡಗಳು, ಕೊಟ್ಟೂರು ತಾಲ್ಲೂಕಿನಲ್ಲಿ 21 ಗ್ರಾಮ ಹಾಗೂ ಕೂಡ್ಲಿಗಿ ತಾಲ್ಲೂಕಿನಲ್ಲಿ 61 ಗ್ರಾಮಗಳಲ್ಲಿ ಒಟ್ಟು ಜಿಲ್ಲೆಯಲ್ಲಿ 333 ಗ್ರಾಮಗಳು ಹಾಗೂ 46 ವಾರ್ಡ್ಗಳಲ್ಲಿ ಬೇಸಿಗೆ ಕಾಲದಲ್ಲಿ ನೀರಿನ ಕೊರತೆ ಉದ್ಭವಿಸಬಹುದು ಎಂದು ಗುರುತಿಸಲಾಗಿದೆ.



ಖಾಸಗಿ ಬೋರ್‌ವೆಲ್ ಮುಖಾಂತರ ಈಗಾಗಲೇ ಜಿಲ್ಲೆಯಲ್ಲಿ 67 ಗ್ರಾಮಗಳಲ್ಲಿ 73 ಖಾಸಗಿ ಕೊಳವೆಬಾವಿಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ತಾಲೂಕು ಮಟ್ಟಗಳಲ್ಲಿ ಟಾಸ್ಕ್–ಫೋರ್ಸ್ ಸಮಿತಿಯನ್ನು ರಚಿಸಲಾಗಿದ್ದು, ಶಾಸಕರ ಅಧ್ಯಕ್ಷತೆಯಲ್ಲಿ ಹಾಗೂ ತಹಸೀಲ್ದಾರರ ಮತ್ತು ಕುಡಿಯುವ ನೀರಿಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಜಂಟಿ ಪರಿಶೀಲನೆ ಮಾಡಿ ಸಮಸ್ಯೆಯಿರುವ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಮತ್ತು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರತಿವಾರ ನಿಯಮಿತ ಪರಿಶೀಲನೆ ನಡೆಸಿ ಬರ ಪರಿಸ್ಥಿತಿಯ ಬಗ್ಗೆ ಮತ್ತು ನೀರಿನ ಕೊರತೆ ನೀಗಿಸುವ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮರ್ಪಕ ಪೂರೈಕೆಗಾಗಿ ಹಲವಾರು ಕ್ರಮ ವಹಿಸಲಾಗಿದ್ದು, ಇನ್ನೂ ಹೆಚ್ಚಿನ ರೀತಿಯಲ್ಲಿ ಅವಶ್ಯ ಕ್ರಮಗಳನ್ನು ಕೈಗೊಂಡು ಒಟ್ಟಾರೆಯಾಗಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಲಾಗುವುದು. ಯಾವುದೇ ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆಗೆ ಮನವಿ ಬಂದ 24 ಗಂಟೆಗೊಳಗಾಗಿ ಕಡ್ಡಾಯವಾಗಿ ಸ್ಪಂದಿಸಬೇಕು ಎಂದು ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ ಮತ್ತು ಎಲ್ಲಾ ತಹಶೀಲ್ದಾರರ ಕಚೇರಿಯಲ್ಲಿ ಬರಗಾಲ ಎದುರಿಸುವ ಸಂಬಂಧ ಸಹಾಯವಾಣಿ (ಹೆಲ್ಪ್ ಲೈನ್ ನಂಬರ್) ಆರಂಭಿಸಲಾಗಿದೆ. ಈ ಸಹಾಯವಾಣಿ ಕೇಂದ್ರಗಳು ಪ್ರತಿ ದಿನ ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5:30 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತವೆ. ಸಹಾಯವಾಣಿ ಸಂಖ್ಯೆಗಳ ವಿವರ: ವಿಜಯನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿನ ಜಿಲ್ಲಾ ವಿಪತ್ತು ತುರ್ತು ನಿರ್ವಾಹಣಾ ಕೇಂದ್ರ ವಾಟ್ಸ್–ಆಪ್ ನಂಬರ್ 81232444428, ತಾಲ್ಲೂಕು ಸಹಾಯವಾಣಿ ಸಂಖ್ಯೆಗಳಾದ ಹೊಸಪೇಟೆ ಸ.ಸಂ: 08394–224208, ಹಗರಿಬೊಮ್ಮನಹಳ್ಳಿ ಸ.ಸಂ: 08397–238255, ಕೂಡ್ಲಿಗಿ ಸ.ಸಂ: 08391–220225, ಕೊಟ್ಟೂರು ಸ.ಸಂ: 08391–225400, ಹಡಗಲಿ ಸ.ಸಂ: 08399–240238 ಹಾಗೂ ಹರಪನಹಳ್ಳಿ ಸ.ಸಂ: 08398–286260, 8095258337 ಗೆ ಸಂಪರ್ಕಿಸಬಹುದಾಗಿದೆ.

ವಿಜಯನಗರ ಜಿಲ್ಲೆಯಲ್ಲಿ ಮುಂಬರುವ ದಿನಗಳಲ್ಲಿ ಯಾವುದೇ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದಲ್ಲಿ ತಕ್ಷಣವೆ ಗ್ರಾಮೀಣ ಕುಡಿಯುವ ನೀರು ಸರಬುರಾಜು ಹಾಗೂ ನೈರ್ಮಲ್ಯ ಇಲಾಖೆ ಮತ್ತು ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು ಮತ್ತು ತಾಲ್ಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸ್ಥಳಿಯ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು ತುರ್ತು ಕ್ರಮಕೈಗೊಂಡು ನೀರು ಪೂರೈಕೆ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. ಅಲ್ಲದೇ ಈಗಾಗಲೇ ಮುಂಜಾಗ್ರತಾ ಕ್ರಮವಾಗಿ ಗುರುತಿಸಿದಂತೆ, ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳತ್ತ ಗಮನ ಹರಿಸಿ ನೀರಿನ ಕೊರತೆಯಾಗದಂತೆ ಮುಂಜಾಗ್ರತೆ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಡಿಸಿ ತಿಳಿಸಿದ್ದಾರೆ

## ಮಾ.12ಕ್ಕೆ ಬಳ್ಳಾರಿ ರೈಲು ನಿಲ್ದಾಣದಲ್ಲ 'ಒಂದು ನಿಲ್ದಾಣ ಉತ್ಪನ್ನತ ಮಳಿಗೆ ಲೋಕಾರ್ಪಣೆ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರು, ಮಾ.12 ರಂದು ಬೆಳಿಗ್ಗೆ 08 ಗಂಟೆಗೆ ಬಳ್ಳಾರಿ ರೈಲು ನಿಲ್ದಾಣದಲ್ಲಿ ಬಳ್ಳಾರಿ, ಹೊಸಪೇಟೆ ಮತ್ತು ತೋರಣಗಲ್ಲು ರೈಲು ನಿಲ್ದಾಣಗಳ 'ಒಂದು ನಿಲ್ದಾಣ ಒಂದು ಉತ್ಪನ್ನತ ಮಳಿಗೆಗಳ ಲೋಕಾರ್ಪಣೆಯನ್ನು ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ ನೆರವೇರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಸಂಸದರಾದ ವೈ.ದೇವೇಂದ್ರಪ್ಪ ಹಾಗೂ ಇತರೆ ಜನಪ್ರತಿನಿಧಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಹುಬ್ಬಳ್ಳಿ ವಿಭಾಗೀಯ ರೈಲ್ವೇ ವ್ಯವಸ್ಥಾಪಕರು ತಿಳಿಸಿದ್ದಾರೆ.

## ಮೀನುಗಾರಿಕೆ ಇಲಾಖೆ: ಮತ್ಸ್ಯವಾಹಿನಿ ವಾಹನಗಳಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಮೀನುಗಾರಿಕೆ ಇಲಾಖೆಯ ವತಿಯಿಂದ ಪ್ರಧಾನಿ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಪರಿಸರ ಸ್ನೇಹಿ ಕಿಯೋಸ್ಕ್ ಮತ್ಸ್ಯ ವಾಹಿನಿ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಮತ್ಸ್ಯವಾಹಿನಿ ವಾಹನಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದ್ದು, ಮಾ.16ರ ಒಳಗೆ ಅರ್ಜಿ ಸಲ್ಲಿಸಬೇಕು ಎಂದು ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ. ಸರ್ಕಾರದ ವಿವಿಧ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ತರಬೇತಿ ಪಡೆದವರು, ಮೀನುಗಾರರ ಉತ್ಪಾದಕ ಸಂಸ್ಥೆಗಳು(FFPO), ಮೀನುಗಾರಿಕೆ ಸಹಕಾರ ಸಂಘಗಳು, ಮಹಿಳಾ ಸ್ವಸಹಾಯ ಗುಂಪುಗಳು, ನಿರುದ್ಯೋಗಿ ಯುವಕ–ಯುವತಿಯರು ಅರ್ಹರಾಗಿರುತ್ತಾರೆ. ಅರ್ಜಿದಾರರು ಸಾಮಾನ್ಯ ವರ್ಗ ರೂ.1 ಲಕ್ಷ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳಾ ವರ್ಗದವರು ರೂ.50 ಸಾವಿರ ಪ್ರಾರಂಭಿಕ ಭದ್ರತಾ ಠೇವಣಿ ಪಾವತಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.8970754167, ಮೊ.9620177588, ಮೊ.9449593156 ಗೆ ಸಂಪರ್ಕಿಸಬಹುದು.

# ಆನೆಗೊಂದಿ ಉತವದಿಂದ ವಿಜಯನಗರ ಸಾಮ್ರಾಜ್ಯದ ವೈಭವ ಕಣ್ತುಂಬಿಕೊಳ್ಳಿರಿ

## ಉತ್ಸವ ಉದ್ಘಾಟನೆ । ಗಂಗಾವತಿ ಶಾಸಕ ಜಿ.ಜನಾರ್ದನ ರೆಡ್ಡಿ ಹೇಳಿಕೆ



**ಹಂಪಿ ಟೈಮ್ಸ್ ಕೊಪ್ಪಳ**

ವಿಚಾರಗೋಷ್ಠಿ ಮೂಲಕ ಆನೆಗೊಂದಿ ಇತಿಹಾಸದ ಬಗ್ಗೆ ಇಂದಿನ ಯುವ ಸಮುದಾಯ ಮತ್ತು ಹೊಸ ಪೀಳಿಗೆಗೆ ತಿಳಿಸುವ ಕೆಲಸವಾಗಬೇಕು ಎಂದು ಗಂಗಾವತಿ ಶಾಸಕರಾದ ಜಿ.ಜನಾರ್ಧನ ರೆಡ್ಡಿ ಅವರು ಹೇಳಿದರು.

ಆನೆಗೊಂದಿ ಉತ್ಸವ–2024ರ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಹಾಗೂ ಕೊಪ್ಪಳ ಜಿಲ್ಲಾಡಳಿತದ ಸಹಯೋಗದಲ್ಲಿ ಆನೆಗೊಂದಿಯ ಗಗನ್ ಮಹಲ್ ಹತ್ತಿರದ ಶಬರಿ ವೇದಿಕೆಯಲ್ಲಿ ಮಾರ್ಚ್ 11ರಂದು ಏರ್ಪಡಿಸಲಾದ "ಆನೆಗೊಂದಿ ಪರಂಪರೆ ಮತ್ತು ಅಭಿವೃದ್ಧಿ" ವಿಷಯದ ವಿಚಾರಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿಯಾಗಿರುವ ಆನೆಗೊಂದಿ ಉತ್ಸವ ಆಚರಣೆಗೆ ಬಹಳಷ್ಟು ಕಡಿಮೆ ಸಮಯದಲ್ಲಿ ನಿರ್ಧಾರ ಮಾಡಿದ್ದರೂ ಸಹ ಉತ್ಸವ ಆಚರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಸಹ ಹಂಪಿ ಉತ್ಸವದ ಬಳಿಕ ಆನೆಗೊಂದಿ ಉತ್ಸವವನ್ನು ಮಾಡಲೇ ಬೇಕು ಎಂದು ಹೇಳಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ ಹಲವು ಅಧಿಕಾರಿಗಳು, ಜನಪ್ರತಿನಿಧಿಗಳ ಪ್ರಯತ್ನದಿಂದ ಉತ್ಸವ ಆಚರಣೆಗೆ ವೇಗ ಸಿಕ್ಕಿದೆ. ವಿಜಯನಗರ ಸಾಮ್ರಾಜ್ಯದ ವೈಭವನ್ನು ಮರುಕಳಿಸುವ ರೀತಿಯಲ್ಲಿ ಆನೆಗೊಂದಿ ಉತ್ಸವವನ್ನು ಆಚರಿಸಲಾಗುತ್ತಿದೆ ಎಂದರು.

ಸಂಶೋಧಕರಾದ ಡಾ.ಶರಣಬಸಪ್ಪ ಕೋಲ್ಕಾರ್ ಅವರು ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ವಿಚಾರಗೋಷ್ಠಿ ರಾಜವಂಶಸ್ಥರಾದ ಲಲಿತರಾಣಿ ರಂಗದೇವರಾಯಲು, ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಗಂಗಾವತಿ ತಹಶೀಲ್ದಾರರಾದ ಯು.ನಾಗರಾಜ, ತಾಲ್ಲೂಕು ಪಂಚಾಯತ್ ಇಓ ಲಕ್ಷ್ಮೀ ದೇವಿ, ಆನೆಗೊಂದಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಮಹದೇವಿ, ಉಪಾಧ್ಯಕ್ಷರಾದ ಪೂರ್ಣಿಮಾ, ಗಣ್ಯರಾದ ಅರುಣಾ ಲಕ್ಷ್ಮೀ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ರಾಜೇಶ್ವರಿ ಸುರೇಶ, ಜಗನ್ನಾಥ್ ದೇಸಾಯಿ, ರಾಮ್ ಮೂರ್ತಿ ನವಲಿ, ನಾಗರಾಜ ಇಂಗಳಗಿ, ಪ್ರಸನ್ನ ದೇಸಾಯಿ, ಸುದರ್ಶನ್ ವರ್ಮ, ರಮೇಶ್ ಕುಲಕರ್ಣಿ, ಮಹೇಶ್ ಸಿಂಗನಾಳ, ಮಂಜುನಾಥ್ ದರೋಜಿ, ಹನುಮಂತಪ್ಪ, ಶಂಶಾದ್ ಬೇಗಂ, ಪಂಪಣ್ಣ ನಾಯಕ, ಅರ್ಜುನ ನಾಯಕ, ವಿರುಪಾಕ್ಷ ನಾಯಕ, ರಾಜೇಶ ರೆಡ್ಡಿ, ಜೀಲಾನ್ ಫಾಶಾ ಖಾದ್ರಿ, ಮಲ್ಲಿಕಾರ್ಜುನ ನಂದಾಪೂರ ವೈ, ರಾಮಣ್ಣ ನಾಯಕ ಬಳ್ಳಾರಿ, ಚನ್ನಬಸವ ಜೇರೆನ್, ರಾಮೇಶ ಕೋಟಿ, ಚಂದ್ರಶೇಖರ ಶೆಟ್ಟಿ, ದೇವಪ್ಪ ವಮಾಳೆ ಕಿ., ಟಿ.ಜಿ ಬಾಬು, ವಿಶ್ವನಾಥ ಬೆಳಗಲ್ ಮಠ, ಎಸ್.ಎಂ ಪಟೇಲ್, ಎಂ.ಜೆ ಶ್ರೀನಿವಾಸ, ಕೆ.ಮಲ್ಲಿಕಾರ್ಜುನ ಸಣಾಪುರ, ಪ್ರವೀಣ ಪೊಲೀಸ್ ಪಾಟೀಲ್, ಶಾಹೀನ್ ಕೌಸರ್ ಹಾಗೂ ಮತ್ತಿತರರು ಪಾಲ್ಗೊಂಡಿದ್ದರು.

# ಗುರುರಾಯರು ಸರ್ವರ ಉದ್ಧಾರಕ

## ಜನರೇ ನಿಶ್ಚಯಿಸಿದ ಜಾಗದಲ್ಲಿ ಮಠ ನಿರ್ಮಿಸಿ ಎಂದ ಜೋಯಿಸ್ ವೇಣುಗೋಪಾಲ

**ಹಂಪಿ ಟೈಮ್ಸ್ ಕೂಡ್ಲಿಗಿ:**

ಪಟ್ಟಣದಲ್ಲಿ ಶ್ರೀ ಗುರು ರಾಘವೇಂದ್ರ ಮಠ ಸ್ಥಾಪನೆ ಮಾಡಿದಲ್ಲಿ ಜನತೆಗೆ ಸುಭೀಕ್ಷೆ ಆರೋಗ್ಯ ಹಾಗೂ ಮಾನಸಿಕ ನೆಮ್ಮದಿ ಜತೆ ರೋಗ, ರುಜನಿಗಳು ದೂರವಾಗುವುದರಲ್ಲಿ ಸಂಶಯವಿಲ್ಲ ಎಂದು ಹುಬ್ಬಳ್ಳಿಯ ಭವಾನಿ ನಗರದ ಶ್ರೀ ರಾಘವೇಂದ್ರ ಮಠದ ವ್ಯವಸ್ಥಾಪಕ ಜೋಯಿಸ್ ವೇಣುಗೋಪಾಲ ಹೇಳಿದರು.

ಪಟ್ಟಣದ ಶ್ರೀ ರಾಘವೇಂದ್ರ ಸ್ವಾಮಿ ಭಕ್ತರ ಅಪೇಕ್ಷೆಯಂತೆ ಕೂಡ್ಲಿಗಿಯಲ್ಲಿ ಗುರು ರಾಯರ ಮಠ ನಿರ್ಮಿಸಲು ಸೇರಿದ್ದ ಧಾರ್ಮಿಕ ಸಭೆಯಲ್ಲಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸುಮಾರು ವರ್ಷಗಳಿಂದಲೂ ಇಲ್ಲಿ ಈಗಾಗಲೇ ರಾಘವೇಂದ್ರ ಸ್ವಾಮಿಗಳ ಮಠ ನಿರ್ಮಾಣವಾಗಬೇಕಿತ್ತು. ಆದರೆ ಕಾರಣಾಂತರಗಳಿಂದ ನೆನೆಗುದಿಗೆ ಬಿದ್ದಿದೆ. ಇತ್ತೀಚಿನ ದಿನಗಳಲ್ಲಿ ಕೆಲ ಯುವಕರು ಹಾಗೂ ಭಕ್ತರು ಗುರುಗಳ ಮಠ ನಿರ್ಮಾಣಕ್ಕೆ ಆಸಕ್ತಿ ವ್ಯಕ್ತಪಡಿಸಿರುವುದು ಸಂತಸದ ವಿಚಾರ. ಗುರು ರಾಯರ ಮಠ ನಿರ್ಮಾಣಕ್ಕೆ ಯಾವುದೇ ಜಾತಿ, ಭೇದವಿಲ್ಲ, ಎಲ್ಲಾ ಜಾತಿ, ಜನಾಂಗದವರ ಕೂಡಿ ಸರ್ವರ ವಿಶ್ವಾಸ ಪಡೆದು ರಾಘವೇಂದ್ರ ಮಠ ನಿರ್ಮಾಣ ಮಾಡಿದರೆ ಅನುಕೂಲ.

ರಾಘವೇಂದ್ರ ಸ್ವಾಮಿಗಳು ಯಾವುದೇ ಜಾತಿಗೆ ಸೀಮಿತವಾಗದೆ ಎಲ್ಲಾ ಜನಾಂಗದ ಭಕ್ತರನ್ನು ಹರಸಿ, ಅವರ ಕಷ್ಟ ಕಾರ್ಪಣ್ಯಗಳಿಗೆ ದಾರಿ ತೋರಿಸಿ, ಭಕ್ತರ ಕಷ್ಟಗಳನ್ನು ದೂರ ಮಾಡಿದವರು. ಎಲ್ಲಾ ಜಾತಿಯವರ ಹೃದಯದಲ್ಲೂ ಗುರುಗಳು ನೆಲಸಿದ್ದಾರೆ, ಯಾವುದೇ ಜಾತಿಯ ಭಕ್ತರು ಕಷ್ಟವೆಂದು ನೆನಸಿದರೂ ಅವರನ್ನು ಸಲುಹಲು ಓಡೋಡಿ ಬರುತ್ತಾರೆ ಎಂದರು. ಮಠ ನಿರ್ಮಾಣಕ್ಕೆ ಮೊದಲು ಜಾಗ ಗುರುತಿಸುವ ಕಾರ್ಯವಾಗಬೇಕು ಅದಕ್ಕೆ ಪಟ್ಟಣದ ಎಲ್ಲಾ ಜನಾಂಗದ ಭಕ್ತರ ಸಭೆ ಕರೆದು ಚರ್ಚಿಸಿ, ಒಮ್ಮತದ ನಿರ್ಧಾರಕ್ಕೆ ಬಂದು ಜನರೇ ನಿಶ್ಚಯ ಮಾಡಿದ ಜಾಗದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ನಿರ್ಮಾಣ ಮಾಡಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೂಡ್ಲಿಗಿ ಜೋಯಿಸ್ ಹುಲಿರಾಜ್, ಜೋಯಿಸ್ ಮಧುಸೂದನ್ ಆಚಾರ್, ಮಾರುತಿ ರಾಯ್ಕರ್, ಕೆ.ಸೋಮಶೇಖರ ಗೌಡ, ಬಿ.ಶ್ರೀಕಾಂತ್, ಪಿ.ಉಮೇಶ್, ವಿವೇಕಾನಂದ, ಜಿ.ಪಿ.ರಂಗನಾಥ, ಬ್ಯಾಟರಿ ರಾಘವೇಂದ್ರ, ಅಶೋಕ್ ಬಾಬುರಾವ್, ಗಂಟಿ ಶ್ರೀನಿವಾಸ್, ವಿನೋದ ಕಲಾಲ್, ರಮೇಶ್, ಪ್ರಕಾಶ್, ವೀರೇಶ್ ಅಂಗಡಿ ಸೇರಿದಂತೆ ಅನೇಕರು ಇದ್ದರು.






ಬೇಕಾಗಿದ್ದಾರೆ
ಪಾರ್ಟ್ ಟೈಮ್ / ಫುಲ್ ಟೈಮ್ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ
ಕುಶಾಲ್ ಟೆಲಿ ಮೊಬೈಲ್ಸ್
Wholesale Dealers in All Brands second hand Mobiles
ರಾಮಾ ಟಾಕೀಸ್ ಹತ್ತಿರ, ಭಾರತ್ ಪೆಟ್ರೋಲ್ ಬಂಕ್ ಎದುರುಗಡೆ, ಹೊಸಪೇಟೆ–583201
M:99029 00085

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA